ಅಧ್ಯಕ್ಷರು : ಮೊದಲು ಒಂದು ಬಿಲ್ ಇಂಟ್ರಡ್ಯೂಸ್ ಮಾಡಿ ಆರ್ಡಿನೆನ್ಸ್ ಲ್ಯಾಪ್ಸ್ ಆಯಿತಲ್ಲಾ ಅದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದರು; ಒಂದು ಆರ್ಡಿನೆನ್ಸ್ ಇಶ್ಯೂ ಮಾಡಿ ಲ್ಯಾಪ್ಸ್ ಆಯಿತು

ಶ್ರೀ ಹೆಚ್. ನಾಗಪ್ಪ : ಹಿಂದೆ ಒಂದು ವಿಧೇಯಕವನ್ನು ಇಂಟ್ರಡ್ಯೂಸ್ ಮಾಡಿದ್ದೆವು

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಿಂದೆ ಅಂದರೆ ಯಾವುದು ನಂಬರ್ ಹೇಳಿ.

MR SPEKAER : That is the Bill. That is the one which is withdrawn.

ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದ) ಬೇಡಿಕೆ ಸಂಖ್ಯೆ (1, 2, 3, 4, 46, 8)

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳಲ್ಲಿ ರೇಷ್ಮೆ ಇಲಾಖೆ ಕೂಡ ಸೇರಿದೆ. ಬಹುಶಃ ಇದುವರೆಗೆ ನಡೆದಂಥ ಚರ್ಚೆಯಲ್ಲಿ ರೇಷ್ಮೆ ಇಲಾಖೆಯ ಬಗ್ಗೆ ಯಾರೂ ಕೂಡ ಬೆಳಕು ಚೆಲ್ಲದೆ ಇರುವುದರಿಂದ, ನಾನು ರೇಷ್ಮೆ ಇಲಾಖೆಯ ಬಗ್ಗೆ ಮಾತ್ರ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರೇಷ್ಮೆ ಕೃಷಿ ಬಹಳ ಹೆಚ್ಚಿನ ಪ್ರಾಮುಖ್ಯತೆ ತೆಗೆದುಕೊಳ್ಳುತ್ತಿದೆ. ಇವತ್ತು ಭಾರತ, ಪ್ರಪಂಚದಲ್ಲಿ ಎರಡನೆಯ ಸ್ಥಾನವನ್ನು ರೇಷ್ಮೆ ಕೃಷಿಯಲ್ಲಿ, ರೇಷ್ಮೆ ವ್ಯವಸಾಯದಲ್ಲಿ ಪಡೆದಿದೆ. ಈ ಎರಡನೆಯ ಸ್ಥಾನಕ್ಕೆ ಬರಬೇಕಾದರೆ, ಇವತ್ತು ಕರ್ನಾಟಕ ಇಡೀ ರಾಷ್ಟ್ರದಲ್ಲಿ ಉತ್ಪಾದನೆ ಆಗತಕ್ಕ ರೇಷ್ಮೆಯಲ್ಲಿ ಶೇಕಡ 60 ಭಾಗವನ್ನು ಈ ರಾಷ್ಟ್ರಕ್ಕೆ ತನ್ನ ಕೊಡುಗೆಯಾಗಿ ಕೊಟ್ಟಿದೆ. ಇವತ್ತು ಇಂಥ ಒಂದು ಪ್ರಮುಖವಾದ ರೇಷ್ಮೆ ಕೃಷಿ ಇನ್ನು ಕೆಲವೇ ವರ್ಷಗಳಲ್ಲಿ ತನ್ನಷ್ಟಕ್ಕೆ ತಾನೇ ಸತ್ತು ಹೋಗತಕ್ಕ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಬಹುಶಃ ಇದಕ್ಕೆ ಕೇಂದ್ರ ಸರ್ಕಾರ ರೇಷ್ಮೆ ಕೃಷಿ ಬಗ್ಗೆ ರೇಷ್ಮೆ ಉದ್ಯಮದ ಬಗ್ಗೆ ಒಂದು ಮೃದು ನಿಲುವು ತಾಳದೆ ಹೋದರೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಇಲ್ಲಿ ಇದ್ದಾರೆ ಮತ್ತು ಮಾನ್ಯ ರೇಷ್ಮೆ ಸಚಿವರು ಇದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ರಾಷ್ಟ್ರದ, ಈ ರಾಜ್ಯದ ರೇಷ್ಮೆ ಕೃಷಿ ಮೇಲೆ ಅತ್ಯಂತ ಮಾರಕವಾದ ಪ್ರಯೋಗ ಏನು ನಡೆಯುತ್ತಿದೆ ಚೈನಾ ದೇಶದಿಂದ ರೇಷ್ಮೆ ಆಮದು ಮಾಡುತ್ತಿರುವುದರಿಂದ, ಅದು ಈ ರಾಜ್ಯದಲ್ಲಿ ಮುಂದೆ ಒಂದು ದಿವಸ ಈ ರೇಷ್ಮೆ ವ್ಯವಸಾಯ ಸಂಪೂರ್ಣವಾಗಿ ನಶಿಸಿ ಹೋಗತಕ್ಕ ಪರಿಸ್ಥಿತಿ ಬರುತ್ತದೆ. ಇವತ್ತು ಚೈನಾದವರು ಕೃಷಿ ಮಾರುಕಟ್ಟೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದು ಭಾರತ ದೇಶ ಎರಡನೆಯ ಸ್ಥಾನದಲ್ಲಿದ್ದು, ಭಾರತ ದೇಶದ ಒಂದು ಪ್ರಭುತ್ವವನ್ನು ಹಾಳು ಮಾಡಬೇಕೆಂಬ ದೃಷ್ಟಿಯಿಂದ ತನ್ನ ಬೆಲೆಯಲ್ಲಿ

ದ್ವಂದ್ವ ನೀತಿಯನ್ನು ಅನುಸರಿಸಿ, ಇವತ್ತು ನಾವು ಏನು ಉತ್ಪಾದನೆ ಮಾಡುತ್ತಿದ್ದೇವೆ ನಮ್ಮ ರಾಷ್ಟ್ರದಲ್ಲಿ ಆ ಉತ್ಪಾದನೆಗಿಂತ ಕಡಿಮೆ ಬೆಲೆಯಲ್ಲಿ ಇವತ್ತು ಚೈನಾ ದೇಶದವರು ನಮ್ಮ ದೇಶಕ್ಕೆ ಕಚ್ಚಾ ರೇಷ್ಮೆಯನ್ನು ಕಳುಹಿಸಿ ನಮ್ಮ ಮಾರುಕಟ್ಟೆ ಮೇಲೆ ಅವರು ಧಾಳಿ ನೆಡೆಸಿ ಮುಂದೆ ಒಂದು ದಿವಸ ವಿಶ್ವ ಮಾರುಕಟ್ಟೆಯಲ್ಲಿ ಭಾರತ ತನ್ನ ಅಸ್ತಿತ್ವವನ್ನು ಮತ್ತು ಸ್ಥಾನವನ್ನು ಕಳೆದುಕೊಳ್ಳಬೇಕೆಂಬ ದೃಷ್ಟಿಯಿಂದ ಇವತ್ತು ದ್ವಂದ್ವ ನೀತಿಯನ್ನು ದ್ವಂದ್ವ ಬೆಲೆಯನ್ನು ಮಾಡತಕ್ಕ ನೀತಿಯನ್ನು ಚೈನಾದೇಶ ಅನುಸರಿಸುತ್ತಿದೆ. ಆಮದು ಮತ್ತು ರಫ್ತು ನೀತಿ ಕೇಂದ್ರ ಸರ್ಕಾರದ್ದು. ಆದರೆ ಇವತ್ತು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ವ್ಯವಸ್ಥಿತವಾಗಿ ಪರಿಣಾಮಕಾರಿಯಾಗಿ ಅವರ ಮೇಲೆ ಒತ್ತಡವನ್ನು ಹೇರಿ, ಇವತ್ತು ಚೈನಾದಿಂದ ಏನು ಕಚ್ಚಾ ರೇಷ್ಮೆ ಆಮದಾಗುತ್ತಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸುವ ಕೆಲಸ ಮಾಡದೇ ಹೋದರೆ ನಮ್ಮ ರಾಜ್ಯ ರೇಷ್ಮೆ ಕೃಷಿ ಮೇಲೆ ಅತ್ಯಂತ ಭೀಕರ ಪರಿಣಾಮ ಬೀರುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಲ್ಲಿ, ಮತ್ತು ರಾಜ್ಯ ರೇಷ್ಮೆ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥಿಸುವುದು ಇಷ್ಟೆ: ಈ ರಾಜ್ಯದ ರೇಷ್ಮೆ ಬೆಳೆಗಾರರ ದೃಷ್ಟಿಯಿಂದ ಈ ರಾಜ್ಯದ ರೇಷ್ಮೆ ಕೃಷಿಯಲ್ಲಿ ತೊಡಗಿರತಕ್ಕ ಜನರ ದೃಷ್ಟಿಯಿಂದ ಚೈನಾದಿಂದ ಬರತಕ್ಕ ಕಚ್ಚಾ ರೇಷ್ಮೆ ಏನಿದೆ ಅದನ್ನು ನಿಲ್ಲಿಸತಕ್ಕ ಕೆಲಸ ಮಾಡಬೇಕು. ಒಂದು ವೇಳೆ ಸಂಪೂರ್ಣವಾಗಿ ನಿಲ್ಲುವುದಕ್ಕೆ ಆಗದೇ ಹೋದರೆ ಇವತ್ತು ನಮಗೆ ಮಾರುಕಟ್ಟೆಯಲ್ಲಿ ಏನು ಬೆಲೆ ಇದೆ ಆ ಬೆಲೆಗಿಂತ ಜಾಸ್ತಿ ನಿಗದಿ ಮಾಡತಕ್ಕ ಕೆಲಸ ಮಾಡಿದರೆ ಆಗ ಮಾತ್ರ ರಾಷ್ಟ್ರದಲ್ಲಿ, ರಾಜ್ಯದಲ್ಲಿ ರೇಷ್ಮೆ ವ್ಯವಸಾಯ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಈ ರಾಜ್ಯದ ರೇಷ್ಮೆ ಬೆಳೆಗಾರರ ಹಿತದೃಷ್ಟಿಯನ್ನಿಟ್ಟುಕೊಂಡು ಕೆಲಸವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹೇರತಕ್ಕ ಕೆಲಸವನ್ನು ತಾವು ದಯಮಾಡಿ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತೇನೆ. ಇವತ್ತು ಏನಾಗಿದೆ ಅಂದರೆ, ನಾನು ಆಗಲೇ ಹೇಳಿದ ಹಾಗೆ ಭಾರತದೇಶದಲ್ಲಿ ನಮ್ಮ ಕರ್ನಾಟಕ ಶೇಕಡ 60 ರಷ್ಟು ಕೊಡುಗೆಯನ್ನು ರೇಷ್ಮೆ ಕೃಷಿಯಲ್ಲಿ ಕೊಡುತ್ತಿದೆ. ಇವತ್ತು ಏನು ರಾಷ್ಟ್ರದಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದೆ ಅದರಲ್ಲಿ ಶೇಕಡ 60 ರಷ್ಟು ಕರ್ನಾಟಕ ಮಾಡುತ್ತಿದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಈ ರೇಷ್ಮೆ ಕೃಷಿಗೆ ಪ್ರಧಾನವಾದ ಮೈಸೂರು ಬಿತ್ತನೆ ವಲಯ ಏನಿದೆ ತುಮಕೂರು ತಾಲ್ಲೂಕು ಸ್ವಲ್ಪಭಾಗ, ಕುಣಿಗಲ್ ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕು ಏನಿವೆ, ಇಲ್ಲಿ ಮೈಸೂರು ಬಿತ್ತನೆ ಗೂಡನ್ನು ತಯಾರು ಮಾಡಿ ಇವತ್ತು ರಾಜ್ಯದಲ್ಲಿ ರೇಷ್ಮೆ ಕೃಷಿ ಅಸ್ತಿತ್ವವನ್ನು ಉಳಿಸತಕ್ಕ ಒಂದು ಪ್ರಾಮಾಣಿಕವಾದ ಕೆಲಸವನ್ನು ಮಾಡುತ್ತಿದ್ದಾರೆ. ಈ ರಾಷ್ಟ್ರದ ರೇಷ್ಮೆ ಹಿತದೃಷ್ಟಿಯಿಂದ ರಾಷ್ಟ್ರದಲ್ಲಿರತಕ್ಕ ರೇಷ್ಮೆ ಕೃಷಿ ಹಿತದೃಷಿಯಿಂದ ಮತ್ತು ರೇಷ್ಮೆ ಉದ್ಯಮದ ದೃಷ್ಟಿಯಿಂದ ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವೇನು ರೇಷ್ಮೆಗೂಡನ್ನು ಉತ್ಪಾದನೆ ಮಾಡುತ್ತಿದ್ದೇವೆ, ಕಚ್ಚಾ ರೇಷ್ಮೆಯನ್ನು ಉತ್ಪಾದನೆ ಮಾಡುತ್ತಿದ್ದೇವೆ ಅದನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಉತ್ಪಾದನೆ ಮಾಡತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಈ ರಾಷ್ಟ್ರದಲ್ಲಿ ನಮ್ಮ ರಾಜ್ಯ ಒಂದರಲ್ಲಿ ಸುಮಾರು 1.67 ಲಕ್ಷ ಜನ ರೇಷ್ಮೆ ಬೆಳೆಗಾರರು ಇದ್ದಾರೆ. ಸುಮಾರು 30 ಲಕ್ಷ ಜನ ರೇಷ್ಮೆ ಉದ್ಯಮದಲ್ಲಿ ತೊಡಗಿದ್ದಾರೆ. 30 ಲಕ್ಷ ಜನ ರೇಷ್ಮೆ ಬೆಳೆಯನ್ನು ನಂಬಿಕೊಂಡು ಜೀವನ ಮಾಡತಕ್ಕ ಜನರು ಇದ್ದಾರೆ. ನಮ್ಮ

ರಾಜ್ಯದಲ್ಲಿರತಕ್ಕ ಶೇಕಡ 80 ರಷ್ಟು ಜನ ರೇಷ್ಮೆ ಬೆಳೆಗಾರರು ಇವತ್ತು ಜೀವನಾಧಾರ ಮಾಡಿಕೊಂಡಿದ್ದಾರೆ. 20 ಭಾಗ ಇವತ್ತು ವಾಣಿಜ್ಯ ಬೆಳೆಯಾಗಿ ಸ್ವೀಕಾರ ಮಾಡಿದ್ದಾರೆ. ಹಣ ಸಂಪಾದನೆಗೋಸ್ಕರ ಶೇಕಡ 20 ರಷ್ಟು ಜನ ರೇಷ್ಮೆ ಕೃಷಿ ಮಾಡುತ್ತಾರೆ. ಆದರೆ ಶೇಕಡ 80 ರಷ್ಟು ಜನ ಇವತ್ತು ತಮ್ಮ ಜೀವನೋಪಾಯಕ್ಕೋಸ್ಕರ ಈವೊಂದು ಕೃಷಿಯನ್ನು ಅವಲಂಬಿಸಿರುತ್ತಾರೆ. ರೇಷ್ಮೆ ಬೆಳೆಗಾರರನ್ನು ಅವರ ಪರಿಸ್ಥಿತಿಯನ್ನು ಉತ್ತಮ ಮಾಡತಕ್ಕ ಕೆಲವು ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳತಕ್ಕದ್ದು ಬಹಳ ಮುಖ್ಯವಾದುದು. ಈ ದಿಸೆಯಲ್ಲಿ ಇವತ್ತು ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಕೇವಲ ನಾಲ್ಕು ಪರ್ಸೆಂಟ್ ಮಾತ್ರ ಕರ್ನಾಟಕ ರಾಜ್ಯದಲ್ಲಿರತಕ್ಕ ಹಿಪ್ಪನೇರಳೆ ಬೆಳೆ ಏನಿದೆ ಅದು ನೀರಿನ ಆಶ್ರಯದಲ್ಲಿದೆ. ಉಳಿದದ್ದು ಮಳೆಯ ಆಶ್ರಯದಲ್ಲಿದೆ. ಮಳೆಯ ಆಶ್ರಯದಲ್ಲಿಯೇ ಹಿಪ್ಪನೇರಳೆಸೊಪ್ಪನ್ನು ಬೆಳೆದು ರೇಷ್ಮೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ಆದರೆ ಇವತ್ತು ಈಗಾಗಲೇ ತಜ್ಞರ ವರದಿ ಬಂದಿದೆ, ಅನೇಕರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉತ್ತಮವಾದ ಇಳುವರಿಯನ್ನು ನಾವು ಪಡೆಯಬೇಕಾದರೆ ಹಿಪ್ಪನೇರಳೆ ಸೊಪ್ಪಿಗೆ ನಾವು ನೀರನ್ನು ಒದಗಿಸತಕ್ಕ ಸೌಲಭ್ಯವನ್ನು ಒದಗಿಸಿಕೊಡಬೇಕೆನ್ನುವುದು ತಜ್ಞರ ಅಭಿಪ್ರಾಯ ಕೂಡ ಇದೇ ಆಗಿದೆ. ನೀರಿನ ಸೌಲಭ್ಯವನ್ನು ಒದಗಿಸಬೇಕಾದರೆ ಏನಾಗಿದೆ ಅಂದರೆ ನಾನು ಆಗಲೇ ಹೇಳಿದ ಹಾಗೆ ಇವತ್ತು ಶೇಕಡ 80 ರಷ್ಟು ಜನ ಮಧ್ಯಮ ವರ್ಗದ ಜನ ಮತ್ತು ಬಡ ವರ್ಗದ ಜನ ರೇಷ್ಮೆ ಕೃಷಿಯನ್ನು ಮಾಡುತ್ತಿದ್ದಾರೆ. ರೇಷ್ಮೆಗೂಡನ್ನು ಬೆಳೆಯತಕ್ಕ ಜನ ಮಧ್ಯಮ ವರ್ಗದವರು ತನ್ನದೇ ಆದಂತಹ ಒಂದು ಸ್ವತಂತ್ರವಾದ ನೀರಿನ ಸೌಲಭ್ಯವನ್ನು ಪಡೆದು ಅದರಿಂದ ಹಿಪ್ಪನೇರಳೆಸೊಪ್ಪನ್ನು ಬೆಳಯತಕ್ಕ ಶಕ್ತಿಯಿಲ್ಲ. ರಾಜ್ಯದ ರೇಷ್ಮೆ ಕೃಷಿ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ರೇಷ್ಮೆ ಬೆಳಗಾರರಿಗೆ ಪ್ರತ್ಯೇಕವಾಗಿ ಜಮೀನಿಗೆ ನೀರಿನ ಸೌಲಭ್ಯವನ್ನು ಕೊಡತಕ್ಕ ಒಂದು ಪ್ರಾಮಾಣಿಕ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ತಮಗೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಎಷ್ಟರ ಮಟ್ಟಿಗೆ ಈ ಬಗ್ಗೆ ಚಿಂತನೆ ನಡೆದಿದೆ ಅಂದರೆ, ಇವತ್ತು ಸುಮಾರು 19 ಲಕ್ಷ ರೂಪಾಯಿ ಸಬ್ಸಿಡಿ ಕುಣಿಗಲ್ ಮೈಸೂರು ಭಿತ್ತನೆ ವಲಯದಲ್ಲಿ ಬರಬೇಕು. 1993-94ನೇ ಸಾಲಿನಲ್ಲಿ ಸಾಲ ಮಂಜೂರಾಗಿರತಕ್ಕ ರೈತರಿಗೆ ಇವತ್ತಿನವರೆಗೆ ಸಬ್ಸಿಡಿ ಹಣ ಬಿಡುಗಡೆಯಾಗಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರಿಗೆ ಪ್ರತ್ಯೇಕವಾಗಿ ನೀರಿನ ಸೌಲಭ್ಯವನ್ನು ವ್ಯವಸ್ಥೆ ಮಾಡತಕ್ಕ ದಿಸೆಯಲ್ಲಿ ಸಾಕಷ್ಟು ಪರಿಣಾಮಕಾರಿಯಾದ ಕೆಲಸವನ್ನು ಮಾಡುತ್ತಿಲ್ಲ. ಆವೊಂದು ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ತಜ್ಞರ ಅಭಿಪ್ರಾಯದಂತೆ ಉತ್ತಮ ರೇಷ್ಮೆ ಗೂಡಿನ ಇಳುವರಿಯನ್ನು ಪಡೆಯಬೇಕಾದರೆ ಇವತ್ತು ಪ್ರತ್ಯೇಕವಾದ ನೀರಿನ ಸೌಲಭ್ಯವನ್ನು ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕು. ರೈತರಿಗೆ ಸುಲಭವಾಗಿ ಸಾಲ ಸಿಗಬೇಕು. ರೈತರ ಜಮೀನಿನಲ್ಲಿ ಅವರಿಗೆ ಬೋರ್‌ವೆಲ್ ತೆಗೆಸಿಕೊಟ್ಟು ನೀರಿನ ವ್ಯವಸ್ಥೆ ಮಾಡಬೇಕು. ಯಾರಾದರೂ ರೈತರು ಸಾಲ ಪಡೆದು ಬೋರ್‌ವೆಲ್ ತೆಗೆಸಿಕೊಂಡಿದ್ದರೆ ಅವರಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಜೊತೆಗೆ ಇವತ್ತು ಸಿರಿಕಲ್ಚರ್ ಪಾಲಿಸಿ ಇನ್ ಕರ್ನಾಟಕ ಎಂದು ಅಕ್ಟೋಬರ್ 1997ರಲ್ಲಿ ಏನು ಮಾಡಿದ್ದಾರೆ ಅದರಲ್ಲಿ ತಾವು ಒಂದು ನಮೂದು ಮಾಡಿದ್ದೀರಿ ಅದು ಈ ರೀತಿ ಇದೆ.

"Drip irrigation is a new technology for more effective use of water for irrigation facilities. The department attempted to avail subsidy facilities on par with the horticulture and agricultural crops. Department got sanction from Government of India for extending 50% of the investment as subsidy to the beneficiaries. Rs. 50,000/- has been worked out as unit cost per hectare, of mulberry plantation. 50% subsidy shared by the Central Silk Board and the State Government at the ratio of 75:25 is got cleared and the scheme should be implemented from January, 1998. All the modalities are being worked out to extend this benefit during the current year. At least 1,000 sericulturists would be covered with drip irrigation system.

ಇದನ್ನು ಹೇಳಿದ್ದಾರೆ. ಕರ್ನಾಟಕ ರೇಷ್ಮೆ ನೀತಿಯಲ್ಲಿ ನೀವು ಹೇಳಿದ್ದೀರಿ. ನಾನೇನು ಹೇಳುತ್ತಿದ್ದೇನೆಂದರೆ 1 ಸಾವಿರ ಫಲಾನುಭವಿಗಳಿಗೆ ಈ ವರ್ಷ ಈ ಸೌಲಭ್ಯವನ್ನು ಕೊಡುತ್ತೇವೆ, ನೀವು ಅದನ್ನು ಮಾಡಿದ್ದೇ ಆದರೆ ಖಂಡಿತವಾಗಿಯೂ ಈ ದಿಸೆಯಲ್ಲಿ ಚಿಂತನೆ ಮಾಡಬೇಕಾಗುತ್ತದೆ. ನೀವು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಮೈಸೂರು ಬಿತ್ತನೆ ವಲಯದಲ್ಲಿ ಇದನ್ನು ಪ್ರಾರಂಭ ಮಾಡಬೇಕಾಗುತ್ತದೆ. ಏಕೆಂದರೆ ಈ ರೇಷ್ಮೆ ಕೃಷಿಗೆ ಉದಯ ಭಾಗ ಮೈಸೂರು ಬಿತ್ತನೆ. ಮೈಸೂರು ಬಿತ್ತನೆ ವಲಯದಲ್ಲಿ ಇದನ್ನು ಪಾರಂಭ ಮಾಡಬೇಕು. ಯಾವುದೇ ಯೋಜನೆಯನ್ನು ರೇಷ್ಮೆ ಇಲಾಖೆ ಒಪ್ಪಿಕೊಳ್ಳಬೇಕಾದರೆ ಅದನ್ನು ಮೈಸೂರು ಬಿತ್ತನೆ ವಲಯದಲ್ಲಿ ಪ್ರಾರಂಭ ಮಾಡಿದರೆ ಮಾತ್ರ ಪರಿಣಾಮಕಾರಿಯಾಗಿ ಎಲ್ಲಾ ಭಾಗಗಳಲ್ಲಿ ಮಿಶ್ರ ತಳಿ ಬೆಳೆಯಬಹುದು. ಇನ್ನೊಂದು ಭಾಗದಲ್ಲಿ ಪರಿಣಾಮಕಾರಿಯಾಗಿ ಮಾಡುವುದಕ್ಕೆ ಆಗುತ್ತದೆ. ನೀವು ಡ್ರಿಪ್ ಇರಿಗೇಷನ್‌ಗೆ ಇದರಲ್ಲಿ ರೇಷ್ಮೆ ನೀತಿಯ ಬಗ್ಗೆ ಏನು ಹೇಳಿದ್ದೀರಿ ಅದರ ಇಂಪ್ಲಿಮೆಂಟೇಷನ್‌ಗೆ ನೀವು ಪರಿಣಾಮಕಾರಿಯಾಗಿ ಮಾಡಬೇಕು. ಮಾನ್ಯ ರೇಷ್ಮೆ ಸಚಿವರು ಆಸಕ್ತಿಯನ್ನು ವಹಿಸಿದರೆ ನಿಜವಾಗಲೂ ಅದು ರೈತರಿಗೆ ಹೋಗುತ್ತದೆ ಸಿರಿಕಲ್ಚರ್ ಪಾಲಿಸಿ ಇನ್ ಕರ್ನಾಟಕ ಪುಸ್ತಕ ಹೊರಡಿಸಿದ್ದೀರಿ. ರೈತರಿಗೆ ಅದರ ಕಂಟೆಂಟ್ಸ್ ತಲುಪಬೇಕಾಗುತ್ತದೆ. ಒಂದು ಸಾವಿರ ಫಲಾನುಭವಿಗಳಿಗೆ ಈ ವರ್ಷ ಡ್ರಿಪ್ ಇರಿಗೇಷನ್ ಅನುಕೂಲ ಮಾಡಿಕೊಡುತ್ತೇವೆ, in consultation with the Central Silk Board at the ratio of 75:25 ಎಂದು ಏನು ಹೇಳಿದ್ದೀರಿ ಅದು ನಿಜವಾಗಲೂ ನಮ್ಮ ರೇಷ್ಮೆಗಾರರಿಗೆ ತಲುಪಿಸತಕ್ಕ ಕೆಲಸವನ್ನು ನಿಮ್ಮ ಇಲಾಖೆಯ ಅಧಿಕಾರಿಗಳು ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ತಾವು ಸೂಕ್ತ ಆದೇಶವನ್ನು ಕೊಡಬೇಕು. ಈಗಾಗಲೇ ಇದೇ ಒಂದು ನೀತಿಯನ್ನು ಇನ್ನೊಬ್ಬ ತಜ್ಞರು ಅಭಿಪಾಯಪಟ್ಟಿದ್ದಾರೆ. ಪ್ರತ್ಯೇಕ ನೀರಿನ ಸೌಲಭ್ಯದ ಜೊತೆಗೆ ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆಯನ್ನು ಕೂಡ ಮಾಡಬೇಕಾಗುತ್ತದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ರೈತ ಯಾವ ಮನೆಯಲ್ಲಿ ವಾಸವಾಗಿದ್ದಾನೆ ಆ ಮನೆಯಲ್ಲಿ ಹುಳು ಸಾಕುತ್ತಾನೆ. ಇದರ ಜೊತೆಗೆ ಮಕ್ಕಳುಮರಿ ದನಕರು ಮೇಕೆ ಕುರಿ ಅಲ್ಲಿಯೇ ಕಟ್ಟುತ್ತಾರೆ. ಹೀಗಾಗಿ ಒಳ್ಳೆಯ

ಉತ್ತಮವಾದ ವಾತಾವರಣದಲ್ಲಿ ರೇಷ್ಮೆಗೂಡನ್ನು ಬೆಳೆಯತಕ್ಕ ಪರಿಸ್ಥಿತಿ ಇಲ್ಲ. ಪ್ರತ್ಯೇಕವಾದ ಹುಳು ಸಾಕಾಣೆ ಮನೆಯನ್ನು ರೈತನಿಗೆ ಕೊಡತಕ್ಕ ಕೆಲಸವನ್ನು ನೀವು ಮಾಡುವುದರಿಂದ ಇವತ್ತು ನಾವೇನು ರೇಷ್ಮೆಗೂಡನ್ನು ತಯಾರು ಮಾಡುತ್ತಿದ್ದೇವೆ ಅದರ ಗುಣಮಟ್ಟ ಒಳೆಯದಾಗಿರುತ್ತದೆ. ಇವತ್ತು ನಾವು 13-14 ಸಾವಿರ ಮೆಟ್ರಿಕ್‌ಟನ್ ರೇಷ್ಮೆಗೂಡನ್ನು ಬೆಳೆಯುತ್ತೇವೆ. 20 ಸಾವಿರ ಮೆಟ್ರಿಕ್ ಟನ್ ನಮ್ಮ ದೇಶಕ್ಕೆ ಬೇಕಾಗಿದೆ. ಅವಶ್ಯಕತೆಗಿಂತ ಕಡಿಮೆ ಬೆಳೆಯುತ್ತಿರುವುದರಿಂದ ಚೈನಾ ದೇಶದವರು ನಮ್ಮ ದೇಶಕ್ಕೆ ಕಡಿಮೆ ಬೆಲೆಯಲ್ಲಿ ರಫ್ತು ಮಾಡುತ್ತಿದ್ದಾರೆ. ಕಡಿಮೆ ಬೆಲೆಯಲ್ಲಿ ಅವರು ರೇಷ್ಮೆ ಗೂಡನು ನಮ್ಮ ದೇಶಕ್ಕೆ ಕಳುಹಿಸುತ್ತಿರುವುದರಿಂದ ನಮ್ಮ ರೈತ ಬೆಳೆದ ರೇಷ್ಮೆಗೂಡಿನ ಬೆಲೆ ಬಿದ್ದುಹೋಗುತ್ತದೆ. ಅವನಿಗೆ ಒಳ್ಳೆಯ ಬೆಲೆ ಸಿಗುವುದಿಲ್ಲ. ಹೀಗಾದರೆ ಅವನು ಬೆಳೆಯತಕ್ಕ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ರೈತನಿಗೆ ಸೌಲಭ್ಯವನ್ನು ಕೊಡದೆ, ಕಡಿಮೆ ಬೆಲೆಗೆ ರೇಷ್ಮೆಯನ್ನು ನೀವು ಆಮದುಮಾಡಿಕೊಳ್ಳತಕ್ಕ ಪರಿಸ್ಥಿತಿಗೆ ಹೊರಟರೆ ಒಂದಲ್ಲ ಒಂದು ಕಾರಣದಿಂದ ರಾಜ್ಯದಲ್ಲಿ ರೇಷ್ಮೆ ಬೆಳೆ ಸರ್ವನಾಶವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಯಾವ ರೈತ ರಾಜ್ಯದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದಾನೆ, ಅವನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಕ್ರಮವನ್ನು ಜರುಗಿಸುವುದಕ್ಕೆ ಮತ್ತು ಅವನಿಗೆ ಯೋಗ್ಯ ಬೆಲೆಯನ್ನು ಕೊಡತಕ್ಕ ಕೆಲಸವನ್ನು ಮಾಡದಿದ್ದರೆ, ಏನು ಇವತ್ತು ರೇಷ್ಮೆ ಕೃಷಿ ನಾಶವಾಗುತ್ತಿದೆ ಅದಕ್ಕೆ ನಾವೆಲ್ಲರೂ ಕಾರಣರಾಗುತ್ತೇವೆ. ದಯಮಾಡಿ ರೈತನಿಗೆ ಹುಳು ಸಾಕಾಣೆ ಮನೆಯನ್ನು ಕಟ್ಟಿಕೊಡತಕ್ಕ ಕೆಲಸವನ್ನು ಮಾಡಬೇಕು. ಸಾಲವನ್ನು ಸುಲಭವಾಗಿ ಕೊಟ್ಟು ಯುನಿಫಾರಂ ಮನೆಯನ್ನು ಕಟ್ಟುವುದಕ್ಕೆ ಸ್ಟ್ರಕ್ಚರ್ ಕೊಡಿ. ಮನೆಯನ್ನು ಕಟ್ಟಲಿಕ್ಕೆ ಸಾಲವನ್ನು ಕೊಡಿ ಅಥವಾ ಇಲಾಖೆಯವರೇ ಮನೆಯನ್ನು ಕಟ್ಟಿಸಿಕೊಡಿ. ಅವನು ಬೆಳೆಯತಕ್ಕ ಗೂಡನ್ನು ಮಾರ್ಕೆಟ್‌ಗೆ ತಂದಾಗ ಅವನು ಕೊಡತಕ್ಕ ಕಂತಿನ ಹಣವನ್ನು ಹಣ ಕೊಡುವಾಗ ಮುಗಿದುಕೊಳ್ಳಿ. ಹುಳು ಸಾಕಣೆ ಮನೆಯನ್ನು ಕಟ್ಟಿ ಕೊಡದಿದ್ದರೆ. ರೈತ ಇರುವ ಪರಿಸ್ಥಿತಿಯಲ್ಲಿ ಉತ್ತಮವಾದ ಯೋಗ್ಯವಾದ ಗೂಡನ್ನು ಬೆಳೆಯುವುದಕಾಗುವುದಿಲ್ಲ. ಉತ್ತಮ ಗೂಡು ಸಿಗುವುದಿಲ್ಲ. ಆದ್ದರಿಂದ ವಿಧಿಯಿಲ್ಲದೆ ಬೇರೆ ರಾಜ್ಯದಿಂದ ಬೇರೆ ರಾಷ್ಟ್ರಗಳಿಂದ ಬೇರೆ ದೇಶದಿಂದ ಕಚ್ಚಾ ರೇಷ್ಮೆಯನ್ನು ತರಿಸಿಕೊಳ್ಳುವುದಕ್ಕೆ ಹೋಗಬೇಕಾಗುತ್ತದೆ. ಪ್ರತ್ಯೇಕವಾದ ಹುಳು ಸಾಕಣೆ ಮನೆಯನ್ನು ಕಟ್ಟಿಸತಕ್ಕ ವಿಷಯದಲ್ಲಿ ಸರ್ಕಾರ ಬಹಳ ಪರಿಣಾಮಕಾರಿಯಾಗಿ ಚಿಂತನೆ ಮಾಡಬೇಕು.

6.30 ಪಿಎಂ

ತಾವು ಹೇಳುತ್ತೀರಿ ಈಗಾಗಲೇ ಕೆಲವು ಸಾಲ ಸೌಲಭ್ಯ ಕೊಡತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಎಂದು ನೀವು ದಯವಿಟ್ಟು ಅಂಕಿಅಂಶಗಳನ್ನು ತರಿಸಿ. ಎಷ್ಟರ ಮಟ್ಟಿಗೆ ಇವತ್ತು ರೈತರಿಗೆ ಸಾಲ ಸೌಲಭ್ಯ ವ್ಯವಸ್ಥೆಯನ್ನು ಎಷ್ಟು ಜನ ಉಪಯೋಗಿಸಿಕೊಂಡಿದ್ದಾರೆ? ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿರ್ತಕ್ಕಂಥ ಎಷ್ಟು ಜನ ರೇಷ್ಮೆ ಬೆಳೆಗಾರರು ಪ್ರತ್ಯೇಕವಾದಂಥ ಹುಳು ಸಾಕಾಣೆಕೆ ಮನೆಯನ್ನು ಇಟ್ಟುಕೊಂಡಿದ್ದಾರೆ ಎಂದು ದಯವಿಟ್ಟು ಹೇಳಬೇಕು. ಹಾಗೇನೂ ಇಲ್ಲ. ಅವರು ತೊಂದರೆಯಲ್ಲಿ ಇದ್ದಾರೆ. ಆದ್ದರಿಂದ ತಾವು ಯಾವುದಾದರೂ ಒಂದು ಪರಿಣಾಮಕಾರಿಯಾದಂಥ ಯೋಜನೆಯನ್ನು

ಮಾಡಿಕೊಂಡು ಪ್ರತ್ಯೇಕವಾಗಿ ಹುಳು ಸಾಕಾಣಿಕೆ ಮನೆಯನ್ನು ಅವರಿಗೆ ಮಾಡಿಕೊಡಬೇಕು; ಇದರ ಜೊತೆಗೆ ಅಂತಿಮವಾಗಿ ಒಂದೇ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಿಷಯ ಗೊತ್ತಿದೆ. ಇವತ್ತು ಈ ಇಲಾಖೆಯಲ್ಲಿ ಏನಾಗುತ್ತಿದೆ ಎಂದರೆ ಸೂಪರ್‌ನ್ಯೂಮರಿ ಪೋಸ್ಟ್ ಎಂದು ಕೆಲವರನ್ನು ತೆಗೆದುಕೊಂಡರು. ನಮ್ಮಲ್ಲಿ ಏನಾಗಿದೆ ಎಂದರೆ ಜಮೀನು ಉಳಬೇಕು, ಮತ್ತೆ ಹಿಪ್ಪುನೇರಳೆ ಸಾಕಬೇಕು, ಹುಳು ಸಾಕಬೇಕು, ಚಂದ್ರಿಕೆ ಮಾಡಬೇಕು ಹೀಗೆ ಪ್ರತಿಯೊಂದು ಕೆಲಸವನು ಸಿ ಮತ್ತು ಡಿ ದರ್ಜೆ ನೌಕರರು ಮಾಡುತ್ತಿದ್ದರು. ಸೂಪರ್ ನ್ಯೂಮರಿ ಪೋಸ್ಟ್ ಎಂದು ತೆಗೆದುಕೊಂಡು ಸುಮಾರು ಮೂರು-ನಾಲ್ಕು ಸಾವಿರ ಜನ ಇವತು ಮೈಸೂರು ಭಿತ್ತನೆ ವಲಯದಲ್ಲಿ ಕೆಲಸ ಮಾಡುತ್ತಿದ್ದರು. ಈ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಈ ಸೂಪರ್ ನ್ಯೂಮರಿ ಪೋಸ್ಟ್‌ಗಳನ್ನು ಪರ್ಮನೆಂಟ್ ಮಾಡಬೇಕೆಂದು ಆಯಿತು. ಅದೇ ರೀತಿಯಲ್ಲಿ ಅವರನ್ನು ಪರ್ಮನೆಂಟ್ ಮಾಡಿ ಅದೇ ಇಲಾಖೆಯಲ್ಲಿ ಉಳಿಸಲಿಲ್ಲ. ರೇಷ್ಮೆ ಬೆಳೆಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಅವರನ್ನು ತೆಗೆದುಕೊಂಡು ಹೋಗಿ ವಿಲೇಜ್ ಅಕೌಂಟೆಂಟ್ ಆಗಿ ಮಾಡಿದಿರಿ. ಇವತ್ತು ರೇಷ್ಮೆ ಇಲಾಖೆಯಲ್ಲಿ ಸುಮಾರು ನಾಲ್ಕು ಸಾವಿರ ಜನರು ಏನು ಕೆಲಸ ಮಾಡುತ್ತಿದ್ದರು. ಆ ಸಿ ಅಂಡ್ ಡಿ ದರ್ಜೆಯ ನೌಕರರು ಬೇರೆ ಇಲಾಖೆಗೆ ವರ್ಗಾವಣೆ ಆದರು. ನಾನು ಮತ್ತು ಸನ್ಮಾನ್ಯ ರೇಷ್ಮೆ ಸಚಿವರು, ಮತ್ತು ಡಿ. ನಾಗರಾಜಯ್ಯ, ಬಾಲಕೃಷ್ಣ ಮುಂತಾಗಿ ನಾಲ್ಕು-ಐದು ಜನ ಶಾಸಕರು ಎಲ್ಲಾ ಸೇರಿ ತಮ್ಮನ್ನು ಭೇಟಿ ಮಾಡಿದ್ದೆವು. ತಾವು ಒಂದು ಸ್ಟೇಆರ್ಡರ್ ಕೊಟ್ಟಿದ್ದೀರಿ; ಈಗ ಹಾಲಿ ಇರತಕ್ಕಂಥವರು ಅಲ್ಲೇ ಕೆಲಸ ಮಾಡಲಿ ಎಂದು ಈಗ ಅವರ ಪರಿಸ್ಥಿತಿ ಏನಾಗಿದೆ ಎಂದರೆ ಅವರನ್ನು ಪರ್ಮನೆಂಟ್ ಮಾಡಿಲ್ಲ, ಅಲ್ಲಿ ಪೋಸ್ಟ್‌ಗಳೂ ಸ್ಯಾಂಕ್ಷನ್ ಆಗಿಲ್ಲ. ಈಗ ಇವರೆಲ್ಲರೂ ಕೂಡ ಬೇರೆ ಇಲಾಖೆಗೆ ಹೋಗಬೇಕು ಎಂದರೆ ಅದು ಕಂಟೆಪ್ಟ್ ಆಫ್ ಕೋರ್ಟ್ ಆಗುತ್ತದೆ ಇದರ ಬಗ್ಗೆ ನಾವು ನ್ಯಾಯಾಲಯಕ್ಕೆ ಹೋಗುತ್ತೇವೆ ಅನ್ನುವ ಮಟ್ಟದಲ್ಲಿ ಅವರು ಇದ್ದಾರೆ. ಒಂದು ಪಕ್ಷ ಏನಾದರು ನ್ಯಾಯಾಲಯದಿಂದ ಒಂದು ಆರ್ಡರ್ ಬಂದು ಈ ನೌಕರರನ್ನು ಬೇರೆ ಇಲಾಖೆಗೆ ಕಳುಹಿಸಬೇಕು ಎಂದು ಆದರೆ ಇವತ್ತು ಸಿ ಅಂಡ್ ಡಿ ದರ್ಜೆಯ ನೌಕರರು ಮಾಡಬೇಕಾದ ಕೆಲಸಗಳು ಏನಿದೆ ಅದನ್ನು ಮಾಡಲಿಕ್ಕೆ ಅಲ್ಲಿ ನೌಕರರೇ ಇರುವುದಿಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಮನವಿ ಇಷ್ಟೇನೆ. There will not be burden to the exchequer of the State. ಈ ರಾಜ್ಯದ ಹಣಕಾಸಿಗೆ ಯಾವುದೇ ರೀತಿಯ ಒತ್ತಡ ಬರುವುದಿಲ್ಲ. ಯಾವುದೇ ರೀತಿಯ ಭಾದಕ ಆಗುವುದಿಲ್ಲ. ಆದ್ದರಿಂದ ಇವತ್ತು ಸಿ ಅಂಡ್ ಡಿ ದರ್ಜೆಯ ನೌಕರರನ್ನು ಇದೇ ಇಲಾಖೆಯಲ್ಲಿ ಖಾಯಂ ಮಾಡಿ ಅವರಿಗೆ ಹುದ್ದೆಗಳನ್ನು ಸೃಷ್ಟಿಸಿ ಅವರನ್ನು ಅಲ್ಲಿ ಹಾಕದೇ ಹೋದರೆ ಖಂಡಿತವಾಗಿಯೂ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ದಿಸೆಯಲ್ಲಿ ನೀವು ಇವತ್ತು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಯಾವುದೇ ಬಾಧಕವಾಗದ ರೀತಿಯಲ್ಲಿ ಇರತಕ್ಕಂಥ ಕೆಲಸವನ್ನು ಸುಲಭವಾಗಿ ಮಾಡಬಹುದು. ಇದರಲ್ಲಿ ಯಾವುದೇ ತೊಂದರೆ ಇಲ್ಲ. ನೀವು ಬೇರೆ ಇಲಾಖೆಯಲ್ಲಿ ಉದ್ಯೋಗ ಸೃಷ್ಟಿ ಮಾಡಿಕೊಡುವುದರ ಬದಲು ಅದೇ ನೌಕರರನ್ನು ಇಲ್ಲೇ ಇರಿಸಿ, ಇದೇ ಸಂಬಳವನ್ನು ಅವರಿಗೆ

ಕೊಡಿ. ಅವರೇನೂ ಬೇರೆ ಕೇಳುತ್ತಿಲ್ಲ. ಈಗ ಎಷ್ಟು ಕೊಡುತ್ತಿದ್ದೀರಿ ಅಷ್ಟೇ ಕೊಟ್ಟರೆ ಸಾಕು. ಆದ್ದರಿಂದ ದಯಮಾಡಿ ಹಾಗೆ ಮಾಡದಿದ್ದರೆ ಇದು ರೇಷ್ಮೆ ಕೃಷಿಗೆ ತೊಂದರೆಯಾಗತಕ್ಕಂಥ ಕೆಲಸವಾಗುತ್ತದೆ. ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ತಾವೇನು ಸ್ಟೇ ಕೊಟ್ಟಿದ್ದೀರಿ, ಅವರನ್ನು ಪರ್ಮನೆಂಟ್ ಮಾಡಿ ಇಲ್ಲೇ ಅವರು ಕೆಲಸ ಮಾಡುವ ವ್ಯವಸ್ಥೆ ಈ ಇಲಾಖೆಯಲ್ಲಿ ಮಾಡುವ ಕೆಲಸ ಮಾಡಬೇಕು. ಯಾವ ಒಂದು ವಿಷಯದಲ್ಲಿ ಅವರು ಟ್ರೈನ್‌ಅಪ್ ಆಗಿದ್ದರು, ಅವರ ಸರ್ವೀಸ್ ಇಲ್ಲಿ ಉಪಯೋಗ ಆಗಬೇಕೆಂದು ಹೇಳುತ್ತಾ, ಇನ್ನು ಒಂದೇ ಒಂದು ವಿಷಯವನ್ನು ಅಂತಿಮವಾಗಿ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸು ಸಚಿವರು ಸ್ವಲ್ಪ ಇಲ್ಲಿ ಗಮನಹರಿಸಬೇಕು. ಮಾನ್ಯ ಹಣಕಾಸು ಸಚಿವರಲ್ಲಿ ಒಂದೇ ಒಂದು ಬೇಡಿಕೆ ಇದೆ. ತಮಗೆ ಗೊತ್ತಿರುವಂತೆ ನಮ್ಮ ಹಿಂದಿನ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ, ತಮ್ಮ ತಾಲ್ಲೂಕಿಗೆ ಬಂದು ಐದು ರೂಪಾಯಿ ಬೋನಸ್ ಕೊಡುತ್ತೇವೆ ಎಂದು ಅನೌನ್ಸ್ ಮಾಡಿಬಿಟ್ಟರು. ಇದು ಎರಡು ವರ್ಷಗಳ ಹಿಂದೆ ನಡೆದದ್ದು. ನಮ್ಮ ಸೀಡ್ ಏರಿಯಾ ಬಗ್ಗೆ ನಾನು ಹೇಳುತ್ತಿರುವುದು. Question of bonus is only for Mysore seed area. ಐದು ರೂಪಾಯಿ ಬೋನಸ್ ಕೊಡುತ್ತೇವೆ ಎಂದು ಅನೌನ್ಸ್ ಮಾಡಿಬಿಟ್ಟರಲ್ಲಾ, ಅದು ಇದುವರೆಗೂ ಆಗಿಲ್ಲ. ಅದು ತಮ್ಮ ಹತ್ತಿರ ಫೈಲು ಪೆಂಡಿಂಗ್ ಇದೆ. ಐದು ರೂಪಾಯಿ ಬೋನಸ್ ಕೊಡುತ್ತೇವೆ ಎಂದು ಹೇಳಿದ್ದು ಅದು ಇನ್ನೂ ಕೊಡದೇ ಇರುವುದರಿಂದ ದಯಮಾಡಿ ಅದನ್ನು ಕೊಡಿ. ನೀವು ಬೋನಸ್ ಕೊಡುವುದು ಯಾರಿಗೆ? ಬೋನಸ್ ಕೊಡುವುದು ಚರಕಕ್ಕೆ ಹೋಗತಕ್ಕಂಥ ಗೂಡಿಗೆ. ಈಗ ಏನಾಗಿದೆ ಎಂದರೆ ಈಗ ಭತ್ತನೆಗೂಡಿಗೆ ಒಳ್ಳೆಯ ರೇಟು ಸಿಕ್ಕಿದೆ. ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಬಿತ್ತನೆ ಗೂಡಿಗೆ ಬಹಳ ಒಳ್ಳೆಯ, ಉತ್ತಮವಾದಂಥ ಬೆಲೆ ಸಿಗುತ್ತಿದೆ. ಆದರೆ ದುರ್ದೈವದಿಂದ ಇವತ್ತು ಶೇಕಡಾ 60 ಭಾಗ ಬಿತ್ತನೆಗೆ ಗೂಡುಗಳು ಹೋಗುತ್ತಿವೆ. 40 ಭಾಗ ಗೂಡು ಬಿತ್ತನೆಗೆ ಹೋಗುವುದಿಲ್ಲ, ಅದು ರೀಲಿಂಗ್‌ಗೆ ಹೋಗುತ್ತದೆ; ಆ ರೇಟಿನಲ್ಲಿ ಕೂಡ ಬಹಳ ವ್ಯತ್ಯಾಸ ಇದೆ. ಅದು 150 ರಿಂದ 200 ರೂಪಾಯಿ ಇದ್ದರೆ ಇವತ್ತು 40 ರಿಂದ 60 ರೂಪಾಯಿ ಅಷ್ಟೇ ಸಿಗುತ್ತಿದೆ. ಆದ್ದರಿಂದ 5 ರೂಪಾಯಿ ಬೋನಸ್ ಏನಿದೆ ಅದನ್ನು ತಕ್ಷಣವೇ ಬಿಡುಗಡೆ ಮಾಡತಕ್ಕಂಥಾದ್ದು ಮಾಡಬೇಕೆಂಬ ಮನವಿಯ ಜೊತೆಗೆ ಇವತ್ತು ಕರ್ನಾಟಕದಲ್ಲಿ ಏನು ರೇಷ್ಮೆ ಉದ್ಯಮ ಇದೆ, ಅದನ್ನು ಉಳಿಸಲಿಕ್ಕೆ ನೀವು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕು. ಅದಕ್ಕೆ ಸಾಕಷ್ಟು ಯೋಜನೆಗಳನ್ನು ಮತ್ತು ಸುಲಭ ರೀತಿಯಲ್ಲಿ ಸಹಾಯಧನ ನೀಡತಕ್ಕಂಥಾದ್ದು ಸಹಕಾರ ನೀಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಹೇಳಿ ಸನ್ಮಾನ್ಯ ಸಭಾಧ್ಯಕ್ಷರಿಗೆ ಕಾಲಾವಕಾಶ ಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಜಯರಾಮಶೆಟ್ಟರೇ, ನೀವು ಹತ್ತು ನಿಮಿಷದಲ್ಲಿ ಮುಗಿಸಬೇಕು. ನಿಮ್ಮದಾದ ಮೇಲೆ ಸುರೇಶ್ ಅವರು ಮಾತನಾಡಿ ಕೃಷಿಗೆ ಹೊರತುಪಡಿಸಿ ಬೇರೆ ಮಂತ್ರಿಗಳು ಉತ್ತರ ಕೊಡುವವರಿದ್ದಾರೆ.

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೇ, ಕೃಷಿ, ಪಶುಸಂಗೋಪನೆ, ತೋಟಗಾರಿಕೆ ಮತ್ತು ಮೀನುಗಾರಿಕೆ ಈ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮದು ರೈತ ಪ್ರಧಾನವಾದ ದೇಶ. ರೈತರ ಉದ್ಧಾರವಾದರೆ ದೇಶದ ಉದ್ಧಾರವಾಗುತ್ತದೆ ಎಂದು ಬಹಳಷ್ಟು ಹಿರಿಯರ ಕಾಲದಿಂದ ನಂಬಿಕೊಂಡು ಬಂದಂಥ ದೇಶ ನಮ್ಮದು. ಬೇಕಾದಷ್ಟು ನಿಸರ್ಗಸಂಪತ್ತು, ಮಾನವಸಂಪತ್ತು, ಭೂಸಂಪತ್ತು ಎಲ್ಲಾ ಇದ್ದರೂ ಕೂಡ ಇವತ್ತಿಗೂ ಕೂಡ ರೈತ ಸಾಲಗಳಲ್ಲಿ ಮುಳುಗಿರುವಂಥ ಪರಿಸ್ಥಿತಿ ಇದೆ. ಹಿಂದಿನ ಕಾಲದಲ್ಲಿ ರೈತ ಮಗಳ ಮದುವೆ ಅಥವಾ ತಂದೆತಾಯಿಗಳ ಉತ್ತರಕ್ರಿಯೆಗಳಿಗೆ ಸಾಲ ಮಾಡಿ ಸಾಲವನ್ನು ವಾಪಾಸ್ಸು ಕೊಡಲಿಕ್ಕೆ ಆಗದಿದ್ದಂಥ ಪರಿಸ್ಥಿತಿ ಇದ್ದರೆ, ಈವಾಗ ಒಳ್ಳೆಯ ಬೆಳೆ ತೆಗೆಯಲು, ರಸಗೊಬ್ಬರಕ್ಕೋಸ್ಕರ, ವ್ಯವಸಾಯ, ಸಲಕರಣೆಗಳಿಗೋಸ್ಕರ, ಕೀಟ ನಾಶಕ ಇತ್ಯಾದಿ ಸಲಕರಣೆ ವಸ್ತುಗಳನ್ನು ಪಡೆಯುವುದಕ್ಕೋಸ್ಕರ ಸಾಲ ಮಾಡಿ ಸಾಲವನ್ನು ತೀರಿಸಲಾಗದಂಥ ಒಂದು ಪರಿಸ್ಥಿತಿಯಲ್ಲಿ ಇಂತಹ ದುಸ್ಥಿತಿಯಲ್ಲಿ ರೈತರು ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮೀನುಗಾರಿಕೆಯಾಗಲೀ, ಪಶುಸಂಗೋಪನೆಯಾಗಲೀ ಎಲ್ಲಾ ವಿಧದಲ್ಲಿ ಇರುವಂಥ ರೈತರು ಸಂಪೂರ್ಣವಾಗಿ ಕಷ್ಟ ಅನುಭವಿಸುತ್ತಿದ್ದಾರೆ. ಪ್ರಥಮವಾಗಿ ಪಶುಸಂಗೋಪನೆ ಬಗ್ಗೆ ಹೇಳುವುದಾದರೆ, ರಾಜಮಹಾರಾಜರ ಕಾಲದಲ್ಲಿ ಬಹಳಷ್ಟು ಆದ್ಯತೆಯನ್ನು ಪಡೆದುಕೊಂಡಿದಂಥ ವ್ಯವಸ್ಥೆ ಈ ರಾಜ್ಯದ್ದು. ಸೈನ್ಯ ಮತ್ತು ಭೂಸಂಪತ್ತಿನಿಂದ ರಾಜ್ಯರ ಸಂಪತ್ತನ್ನು ಅಳೆಯುತ್ತಿದ್ದ ಕಾಲ ಇತ್ತು. ಇವತ್ತು ಮಂಗಳ ಗ್ರಹಕ್ಕೆ ಹೋಗುತ್ತಿದ್ದೇವೆ. ಅನ್ಯ ಲೋಕಗಳ ವಿಶ್ಲೇಷಣೆ ಮಾಡತಕ್ಕಂಥ ಈ ಕಾಲದಲ್ಲಿ ಇವತ್ತಿಗೂ ಕೂಡ ಕುದುರೆ ಅಥವಾ ಬೇರೆ ಪ್ರಾಣಿಗಳನ್ನು ಉಪಯೋಗ ಮಾಡಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಸಾರಿಗೆ ಸಾಗಾಣಿಕೆಯಾಗುತ್ತಿದ್ದು, ಇವತ್ತೂ ಕೂಡ ಪ್ರಾಣಿಗಳನ್ನು ಉಪಯೋಗ ಮಾಡುತ್ತಿರುವುದರಿಂದ ಇಂದಿಗೂ ಕೂಡ ನಾವು ಪಶುಸಂಗೋಪನೆಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೇವೆ. ಮೂಲತಃ ಪಶುಗಳ ಆರೋಗ್ಯದ ಬಗ್ಗೆ, ಇವುಗಳಿಂದ ನಮ್ಮ ಮಣ್ಣಿನ ಸತ್ವವನ್ನು ಒಳ್ಳೆಯತನದಿಂದ ಉಪಯೋಗ ಮಾಡಿಕೊಳ್ಳುವುದಕ್ಕೋಸ್ಕರ ಪ್ರಾಣಿಗಳ ಸಗಣಿಯನ್ನು ನಾವು ಉಪಯೋಗ ಮಾಡುತ್ತೇವೆ. ಇದು ಎರಡರಲ್ಲೂ ಕೂಡ ಪಶುಸಂಗೋಪನೆಗೆ ಹೆಚ್ಚು ಮಹತ್ವ ಕೊಟ್ಟರೆ ನಮ್ಮ ದೇಶ ಅಥವಾ ರಾಜ್ಯ ಈ ವಿಚಾರದಲ್ಲಿ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡಬಹುದು ಎಂಬುದು ನನ್ನ ಅನಿಸಿಕೆ. ಇವತ್ತು ಪಶುಗಳ ಆರೋಗ್ಯದ ಬಗ್ಗೆ ಅವುಗಳಿಗೆ ಬರುವ ಬಾಯಿರೋಗ ಮತ್ತು ಗೊರಸು ರೋಗಗಳ ಬಗ್ಗೆ ನಿಖರವಾದ ಕಾರ್ಯಕ್ರಮ ಸರ್ಕಾರದ ಮುಂದೆ ಇಲ್ಲ. ಬೇಕಾದಂಥ ವಿಚಾರಗಳು, ಮದ್ದುಗಳೂ ಇದ್ದರೂ ಕೂಡ ಸಕಾಲದಲ್ಲಿ ಈ ಎರಡು ರೋಗಗಳಿಗೆ ಬೇಕಾದ ಮದ್ದುಗಳು ಗ್ರಾಮಾಂತರ ಪ್ರದೇಶದಲ್ಲಿ ಸಿಗುವಂಥ ಪರಿಸ್ಥಿತಿ ಇಲ್ಲ. ಗೋವುಗಳನ್ನು ಪೂಜಿಸುವಂಥ ದೇಶ ನಮ್ಮದು. ಹಾಗಿದ್ದರೆ ಸರ್ಕಾರ ಪಶುಸಂಗೋಪನೆಗೆ ಮತ್ತು ಹೈನುಗಾರಿಕೆಗೆ ಮಹತ್ವವನ್ನು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೊಟ್ಟಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇವತ್ತು ಕೋಳಿ ಸಾಕಾಣಿಕೆ ಅಥವಾ ದನಗಳನ್ನು ಕೊಳ್ಳುವುದು ಇರಬಹುದು, ಐಆರ್‌ಡಿಪಿ ಸಾಲದಿಂದ ಇವತ್ತು ದನ-ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಅಥವಾ ಕೋಳಿ ಸಾಕಾಣಿಕೆಗೆ ಸಾಲವನ್ನು ಕೊಡುವಂಥ ಪರಿಸ್ಥಿತಿ ಇಲ್ಲ. ಯಾವುದೇ ಬ್ಯಾಂಕ್ ಆಗಲಿ

ಅಥವಾ ಸಹಕಾರ ಇಲಾಖೆಗಳಾಗಲೀ, ಸಾಲ ಮಂಜೂರು ಮಾಡಿದರೂ ಕೂಡ ಬ್ಯಾಂಕುಗಳು ಬೇರೆ ಬೇರೆ ಕಾರಣಗಳನ್ನು ಕೊಟ್ಟು ಕೋಳಿ ಸಾಗಾಣಿಕೆಗೆ, ದನಗಳನ್ನು ಕೊಂಡುಕೊಳ್ಳುವುದಕ್ಕೆ ಸಾಲವನ್ನು ಕೊಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಇವತ್ತು ಒಬ್ಬ ರೈತ ಎರಡು-ಮೂರು ವರ್ಷದಿಂದ, ಕನಿಷ ಒಂದು ವರ್ಷವಾದರೂ ಕೂಡ ಈ ಸಾಲದ ಹಿಂದೆ ತಿರುಗಾಡುತ್ತಿದ್ದಾನೆ. ಅವರಿಗೆ ಬರಬೇಕಾದ ಸಹಾಯಕ್ಕಾಗಿ ಅವರು ವರ್ಷಗಟ್ಟಲೆ ಬ್ಯಾಂಕ್ ಅಥವಾ ಸರ್ಕಾರಿ ಕಛೇರಿಗಳನ್ನು ಅಲೆದಾಡಬೇಕಾದಂಥ ದುಸ್ಥಿತಿ ಇವತ್ತೂ ಕೂಡ ನಿರ್ಮಾಣವಾಗಿದೆ. ಆದ್ದರಿಂದ ಪಶು ಆಹಾರದ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು. ಮುಂಚೆ ಸಕ್ಕರೆ ಕಾರ್ಖಾನೆಗಳಲ್ಲಿ ಹೊರಚೆಲ್ಲುವಂಥ ತ್ಯಾಜ್ಯವಸ್ತುಗಳನ್ನು ಪಶು ಆಹಾರವಾಗಿ ಉಪಯೋಗಿಸುತ್ತಿದ್ದರು. ಈಗ ಅದು ಕಡಿಮೆಯಾಗುತ್ತಿದೆ, ಹೆಚ್ಚು ಕಡಿಮೆ ಅದು ಸಿಗುವುದೇ ಇಲ್ಲ. ಆದ್ದರಿಂದ ಬೇರೆ ವಿಧದಲ್ಲಿ ಪಶು ಆಹಾರ ಸಂಗ್ರಹ ಮಾಡುವಂಥಾದ್ದು ಅಥವಾ ಪಶು ಆಹಾರ ಉತ್ಪಾದನೆ ಮಾಡುವುದರ ಬಗ್ಗೆ ತಾವು ಗಮನ ಕೊಟ್ಟರೆ ಹೆಚ್ಚು ರೈತರಿಗೆ ಸಮಂಜಸವಾದ ಸಹಾಯ ಮಾಡಿದ ಹಾಗೆ ಆಗಬಹುದು. ಊರಿನಲ್ಲಿ 5-6 ರೂಪಾಯಿ ಒಂದು ಲೀಟರ್ ಹಾಲಿಗೆ ಇದ್ದರೆ ಅದು ಹೊರಗಡೆ 10-12 ರೂಪಾಯಿಗಳಿಗೆ ಹೋಗುತ್ತದೆ. ಗ್ರಾಹಕರ ಒಂದು ಲೀಟರ್‌ಗೆ 10 ರೂಪಾಯಿ ಕೊಟ್ಟು ತೆಗೆದುಕೊಳ್ಳುವುದಾದರೆ ಮೂಲತಃ ಆ ರೈತರಿಗೆ ಸಿಗುವುದು ಒಂದು ಲೀಟರ್‌ಗೆ 6-7 ರೂಪಾಯಿ. ಆದರೆ ನಿಶ್ಚಿತವಾದ ರೀತಿಯಲ್ಲಿ ಡೈರಿಗಳ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಪೂರ್ಣವಾಗಿ ನೀವು ಉಪಯೋಗ ಮಾಡಲಿಲ್ಲ. ಸರ್ಕಾರದ ದೃಷ್ಟಿಯಲ್ಲಿ ಧಾರವಾಡದ ಡೈರಿ ಉಂಟು. ಈಗಲೂ ಕೂಡ ಅದು ನಷ್ಟದಲ್ಲಿ ಉಂಟು. ಈಗಲೂ ಕೂಡ ಅದು ಎಲ್ಲಾ ವಿಧದ ಮಿಲ್ಕ್ ಪೌಡರ್‌ಗಳನ್ನು ಉತ್ಪತ್ತಿ ಮಾಡಿದರೂ ಕೂಡ ಅದು ಪೂರ್ಣಪ್ರಮಾಣದಲ್ಲಿ ನಷ್ಟದಲ್ಲಿಂಟು. ಮಂಗಳೂರಿನಲ್ಲಿ ಹಾಲು ಸಿಗುತ್ತಿಲ್ಲ ಎಂದು ತಾವೇ ಉತ್ತರ ಕೊಟ್ಟಿದ್ದೀರಿ. ಅದಕ್ಕೆ ಮಿಲ್ಕ್ ಪೌಡರನ್ನು ಉಪಯೋಗ ಮಾಡಿಕೊಂಡು ಕೊಡುತ್ತಿದ್ದೇವೆ ಎಂದು ತಾವು ದನಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೈಬ್ರೀಡ್‌ಗೆ ತರುವುದು ಅಥವಾ ಹಚ್ಚು ಮಿಶ್ರ ತಳಿಯ ಜಾನುವಾರುಗಳನ್ನು ಒದಗಿಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹಾಲು ಉತ್ಪಾದನೆ ಮಾಡುದಕ್ಕೆ ಸಾಧ್ಯತೆ ಆಗುವುದಂಟು. ನಾನು ಇದರ ಬಗ್ಗೆ ತಮ್ಮ ಹತ್ತಿರ ಒಂದೇ ವಿನಂತಿ ಮಾಡುತ್ತೇನೆ. ಮೂನುಗಾರರ ಬಗ್ಗೆ ಮೂನುಗಾರಿಕೆ ವಿಶ್ವವಿದ್ಯಾನಿಲಯವುಂಟು. ಕೃಷಿ ವಿಶ್ವವಿದ್ಯಾನಿಲಯವುಂಟು. ತಾವು ಏಕೆ ಹೈನುಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಹೈನುಗಾರಿಕೆ ವಿಶ್ವವಿದ್ಯಾಲಯವನ್ನು ತೆಗೆದುಕೊಳ್ಳಬಾರದು? ಇದರ ಬಗ್ಗೆ ಎಲ್ಲಾ ಮಾಹಿತಿಗಳನ್ನು ಈಗಿನ ಹೊಸ ಪೀಳಿಗೆಗೆ ಕೊಟ್ಟರೆ ಖಂಡಿತ ಹೈನುಗಾರಿಕೆ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಒತ್ತು ಕೊಟ್ಟ ಹಾಗೆ ಆಗುತ್ತದೆ. ಪಶು ಆಸ್ಪತ್ರೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ತಾವು ತೆರೆದರೆ ಖಂಡಿತ ರೈತರಿಗೆ ಉಪಯೋಗವಾಗುತ್ತಾ ಉಂಟು. ನಮ್ಮ ದಕಿಣ ಕನ್ನಡ ಜಿಲ್ಲೆ ಒಂದರಲ್ಲೇ ತಮ್ಮ ಇಲಾಖಾ ಪ್ರಕಾರ ಜಿಲ್ಲೆಯಲ್ಲಿ 35 ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗಳು ಖಾಲಿ ಇದೆ. ಈಗ 'ಡಿ' ದರ್ಜೆಯ ಹುದ್ದೆಗಳು 28 ಖಾಲಿ ಇದೆ. ಪಶುವೈದ್ಯ ಮೇಲ್ವಿಚಾರಕರ ಹುದ್ದೆಗಳು 2 ಖಾಲಿ ಉಂಟು. ಪಶುವೈದ್ಯ ಅಧಿಕಾರಿಗಳ ಹುದ್ದೆಗಳು 11 ಖಾಲಿ

ಉಂಟು. ಪಶುವೈದ್ಯ ಪರೀಕ್ಷಕರದ್ದು 11 ಖಾಲಿ ಉಂಟು. ಒಟ್ಟು ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೆ 159 ಹುದ್ದೆಗಳು ಖಾಲಿ ಉಂಟು. ಇಡೀ ರಾಜ್ಯದಲ್ಲಿ ಒಂದು ಅಂಕಿ ಅಂಕಿಅಂಶಗಳ ಪ್ರಕಾರ 2200 ಹುದ್ದೆಗಳು ಅಧಿಕಾರಿಗಳ ಮತ್ತು ಬೇರೆ ಬೇರೆ ಹುದ್ದೆಗಳು ಖಾಲಿ ಇವೆ. ಹೈನುಗಾರಿಕೆಯಿಂದ ತಾವು ರಾಜ್ಯದ ಜನರಿಗೆ ಹೆಚ್ಚು ನಿರೀಕ್ಷಿತ ಪ್ರಮಾಣದಲ್ಲಿ ಸಹಕಾರ ಮತ್ತು ಸಹಕಾರ ಕೊಟ್ಟಂತೆ ಆಗುವುದಿಲ್ಲ ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸದ್ಯಕ್ಕೆ ರಿಕ್ರೂಟ್‌ಮೆಂಟ್ ಕಮಿಟಿ ಇಲ್ಲ. ಈ ಜಿಲ್ಲೆಗೆ ಇತರೇ ಜಿಲ್ಲೆಯ ಅಧಿಕಾರಿಗಳು ಬಂದು ಅಲ್ಲಿ ನೇಮಕ ಮಾಡಿ ಬೇರೆ ಕಡೆಗೆ ಹೋಗುತ್ತಾರೆ. ಆದ್ದರಿಂದ ನಮ್ಮ ಜಿಲ್ಲೆಗೆ ತಾವು ಒಂದು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿದರೆ ಹೈನಾಗಾರಿಕೆ ಬಗ್ಗೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆಂದು ನನ್ನ ಅನಿಸಿಕೆ. ಮಂಗಳೂರು ತಾಲ್ಲೂಕಿನಲ್ಲಿ ಒಂದು ಮೊಲ ಸಾಕಾಣಿಕೆ ಕೇಂದ್ರ ಉಂಟು. ಅಲ್ಲಿ ಒಂದು ವರ್ಷಕ್ಕೆ ಒಂದು ಸಾವಿರ ಮೊಲ ಉತ್ಪತ್ತಿ ಮಾಡುವ ಕೇಂದ್ರ ಉಂಟು. ಆದರೆ ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ರೈತರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ಆದರೆ ಅದಕ್ಕೆ ಬೇಕಾದಂತಹ ಸಿಬ್ಬಂದಿ ಇಲ್ಲ. ಆಹಾರ ಕೊಡುವ ಜನಗಳು ಇಲ್ಲ. ಆದ್ದರಿಂದ ದಯವಿಟ್ಟು ತಾವು ಇದರ ಬಗ್ಗೆ ಗಮನ ಕೊಡಬೇಕು. ಇದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 10 ಲಕ್ಷ ಜಾನುವಾರುಗಳು 600 ಕೋಳಿ ಫಾರಂಗಳು ಇವೆ. ಇವುಗಳ ಆರೋಗ್ಯದ ರಕ್ಷಣೆ ದೃಷ್ಟಿಯಿಂದ ಸುಸಜ್ಜಿತವಾದ ಒಂದು ಪ್ರಯೋಗಶಾಲೆ ಮಂಗಳೂರಿನಲ್ಲಿ ಇಲ್ಲದೇ ಇರುವುದರಿಂದ ದಯವಿಟ್ಟು ತಾವು ಈ ಕಡೆಗೆ ಗಮನಹರಿಸಬೇಕು, ಕೂಡಲೇ ತಜ್ಞ ಪಶುವೈದ್ಯರನ್ನು ನೇಮಕ ಮಾಡುವ ಬಗ್ಗೆ ತಾವು ಹೆಚ್ಚು ಗಂಭೀರವಾಗಿ ಕೆಲಸ ಮಾಡಬೇಕು ಎಂದು ವಿನಂತಿಸುವುದರ ಜೊತೆಗೆ ಮಂಗಳೂರು ಮತ್ತು ಕಾರ್ಕಳದಲ್ಲಿ ಪಾಲಿಕ್ಲಿನಿಕ್ ಕಟ್ಟಡಗಳನ್ನು ಈಗಾಗಲೇ ಒದಗಿಸಲಾಗಿದೆ. ಆದರೆ ಅದಕ್ಕೆ ಬೇಕಾದಂತಹ ಹುದ್ದೆಗಳನ್ನು ತಾವು ಇದುವರೆಗೂ ಮಂಜೂರು ಮಾಡಲಿಲ್ಲ. ಆದ್ದರಿಂದ ಇಲ್ಲಿ ಹುದ್ದೆಯನ್ನು ಮಂಜೂರು ಮಾಡಿ ಸಿಬ್ಬಂದಿಯನ್ನು ನೇಮಕ ಮಾಡಿದರೆ ಈಗಾಗಲೇ ತಾವು ಏನು ಪಾಲಿಕ್ಲಿನಿಕ್ ಕಟ್ಟಡಗಳನ್ನು ತೆರೆದಿದ್ದೀರಿ ಅದರ ಉಪಯೋಗ ಜನರಿಗೆ ಅಥವಾ ರೈತರಿಗೆ ಖಂಡಿತ ಆಗಬಹುದು ಎಂಬುದು ನನ್ನ ಅನಿಸಿಕೆ. ಅದರ ಜೊತೆಗೆ ಪಶು ಸಂಚಾರಿ ಚಿಕಿತ್ಸಾಲಯಗಳು, ಅನುದಾನದ ಕೊರತೆಯಿಂದ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದೆ. ಬಹಳ ವರ್ಷಗಳಿಂದ ಅದಕ್ಕೆ ಅನುದಾನದ ಕೊರತೆ ಇದ್ದುದರಿಂದ ಅದರ ಬಗ್ಗೆ ತಾವು ಗಮನಕೊಡಬೇಕೆಂದು ನಾನು ವಿನಂತಿ ಮಾಡುತ್ತಾ ಜೊತೆಗೆ ತೋಟಗಾರಿಕೆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ತೋಟಗಾರಿಕೆ ಇಲಾಖೆ ಇದೇನು ಸರ್ಕಾರದಿಂದ ಕೊಟ್ಟ ಕೊಡುಗೆ ಖಂಡಿತ ಅಲ್ಲ. ನಮ್ಮ ಹಿರಿಯರಿಂದ ಪರಂಪರಾನುಗತವಾಗಿ ಬಂದಂತಾದ್ದು. ಸಾವಿರಾರು ವರ್ಷಗಳಿಂದ ಅದು ಬಂದಂತಾದ್ದು. ಇವತ್ತು ಕರ್ನಾಟಕ ರಾಜ್ಯಕ್ಕೆ ಸೇಲ್ಸ್ ಟ್ಯಾಕ್ಸ್ ಅಥವಾ ಮಾರ್ಕೆಟ್ ಸೆಸ್ ಅಥವಾ ಟರ್ನ್ ಓವರ್ ಟ್ಯಾಕ್ಸ್ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಬರುತ್ತಾ ಉಂಟು. ನನ್ನ ಒಂದು ಅಂದಾಜು ಲೆಕ್ಕಾಚಾರದ ಪ್ರಕಾರ ಸುಮಾರು 5874 ಕೋಟಿ ರೂಪಾಯಿಗಳ ಉತ್ಪಾದನೆ ನಮ್ಮ ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆಯಿಂದ ಆಗುತ್ತಾ ಇದೆ. ಹೆಚ್ಚು ಕಡಿಮೆ ಇಡೀ ರೈತರ

ಉತ್ಪತ್ತಿ ಶೇಕಡ 46ರಷ್ಟು ಆಗುತ್ತಾ ಉಂಟು. ಆದ್ದರಿಂದ ತಾವು ತೋಟಗಾರಿಕೆ ಬಗ್ಗೆ ಹೆಚ್ಚುಗಮನವನ್ನು ಕೊಟ್ಟರೆ. ಹೆಚ್ಚು ಅನುಕೂಲ ಮತ್ತು ಆದಾಯವಾಗುತ್ತದೆ. ನಾನು ಗುಟ್ಕದ ಬಗ್ಗೆ ಹೆಚ್ಚು ಮಾತವಾಡಲು ಹೋಗದಿದ್ದರೂ ಕೂಡ ಪುನಃ ನಾನು ಅಡಿಕೆ ಬೆಳೆಗಾರರ ಸಂಕಷ್ಟವನ್ನು ಗುಟ್ಕ ನಿಷೇಧದ ಬಗ್ಗೆ ತಾವು ಕೇಂದ್ರ ಸರ್ಕಾರಕ್ಕೆ ತಾವು ಮನವಿಯನ್ನು ಅರ್ಪಿಸಿ ವಿಶೇಷವಾಗಿ ಅಡಿಕೆ ಬೆಳೆಗಾರರ ಬಗ್ಗೆ ತಾವು ಹೆಚ್ಚು ಹೊತ್ತು ಕೊಟ್ಟು ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದು ಅಲ್ಲದಿದ್ದರೆ ಸುಮಾರು 40-50 ಲಕ್ಷ ಜನ ಅಡಿಕೆ ಬೆಳೆಗಾರರು ಪೂರ್ತಿಯಾಗಿ ಕಂಗಾಲಾಗುವ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಬೆಳೆಗಾರರ ಬಗ್ಗೆ ಸುಮಾರು 50-60 ವರ್ಷಗಳಿಗೆ ಲೀಜ್‌ನಲ್ಲಿ ಕೊಟ್ಟ ಜಾಗಗಳನ್ನು 1957ರಲ್ಲಿ ಗೇರು ವ್ಯವಸಾಯಕ್ಕೋಸ್ಕರ ಲೀಜ್‌ನಲ್ಲಿ ಕೊಟ್ಟಿದ್ದಾರೆ. ಆಗ 40-50 ಎಕರೆ ಜಮೀನನ್ನು 5 ವರ್ಷದ ಲೀಜ್‌ನಲ್ಲಿ ಕೊಟ್ಟಿದ್ದು ಸರ್ಕಾರ ನಾಮಿನಲ್ ಅಮೌಂಟ್‌ನಲ್ಲಿ ಅವರಿಗೆ ಜಾಗ ಕೊಟ್ಟಿದೆ. ಈಗ ರಾಜ್ಯ ಸರ್ಕಾರ ಅವರಿಂದ ಎಕರೆ ಒಂದಕ್ಕೆ 40 ರಿಂದ 50 ಸಾವಿರ ರೂಪಾಯಿಗಳನ್ನು ವಸೂಲಿ ಮಾಡುವುದು ಇರಾದೆಯಲ್ಲಿದೆ. ಇದರಿಂದಾಗಿ ಗೇರು ಕೃಷಿಕರಿಗೆ ಬಹಳಷ್ಟು ತೊಂದರೆಗಳು ಆಗುವ ಸಾಧ್ಯತೆಯುಂಟು. ಜೊತೆಗೆ ಮೊನ್ನೆ ಮಾನ್ಯ ಕೃಷಿ ಸಚಿವರು ಪುಷ್ಪಾಭಿವದ್ಧಿ ಬಗ್ಗೆ ಬಹಳಷ್ಟು ದೊಡ್ಡ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಇಡೀ ಏಷಿಯಾದಲ್ಲಿ ನಮ್ಮ ರಾಜ್ಯವೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುವಂತಹ ವಿಚಾರವನ್ನು ಹೇಳುತ್ತಿದ್ದರು. ಆದರೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ರಾಜ್ಯದಲ್ಲಿ ಗುಲಾಬಿ ಹೂವುಗಳ ರಫ್ತು ಜಾಸ್ತಿ ಉಂಟು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ಮಲ್ಲಿಗೆ ಎಂದು ಉಂಟು. ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಜನರನ್ನು ಆಕರ್ಷಣೆ ಮಾಡುತ್ತಾ ಉಂಟು. ಇದರ ಬಗ್ಗೆ ಮತ್ತು ಇದರ ಸ್ಟೋರೇಜ್ ಬಗ್ಗೆ ಏನೂ ವ್ಯವಸ್ಥೆಗಳು ಇಲ್ಲ. ಇವತ್ತು ನೆದರ್‌ಲ್ಯಾಂಡ್‌ನಲ್ಲಿ ಸುಮಾರು 90 ಸಾವಿರ ಎಕರೆ ಪ್ರದೇಶಗಳಲ್ಲಿ ಗ್ರೀನ್‌ಹೌಸ್‌ಗಳು ಇವೆ. ಚೀನಾದಲ್ಲಿ ಸುಮಾರು 40 ಸಾವಿರ ಎಕರೆ ಪ್ರದೇಶಗಳಲ್ಲಿ ಗ್ರೀನ್ ಹೌಸ್‌ಗಳುಂಟು. ಜಪಾನ್‌ನಲ್ಲಿ 40 ಸಾವಿರ ಎಕರೆ ಪ್ರದೇಶದಲ್ಲುಂಟು. ಆದರೆ ಭಾರತ ದೇಶದಲ್ಲಿ 350 ಎಕರೆ ಮಾತ್ರ ಇರುವುದು. ಆದರೆ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂಬುದು ನನ್ನ ಅನಿಸಿಕೆ. ಜಗತ್ತಿನಲ್ಲಿ ನಮ್ಮದೇ ಪುಷ್ಪಾಭಿವೃದ್ಧಿಯಲ್ಲಿ ಶ್ರೇಷ್ಟ ಎಂದು ಯಾವ ಅರ್ಥದಲ್ಲಿ ಹೇಳಿದಿರಿ ಎಂಬುದು ನನಗೆ ಗೊತ್ತಾಗುತ್ತಿಲ್ಲ ಆದ್ದರಿಂದ ತಾವು ಈ ಗ್ರೀನ್ ಹೌಸ್‌ನ ಬಗ್ಗೆ ಕರ್ನಾಟಕದಲ್ಲಿಯೂ ಕೂಡ ಮಾನ್ಯ ತೋಟಗಾರಿಕಾ ಮಂತ್ರಿಗಳು ಇದರ ಬಗ್ಗೆ ಒತ್ತು ಕೊಡಬೇಕು. ನಮ್ಮ ಉಡುಪಿಯ ಮಲ್ಲಿಗೆಗೆ ಬಿಳಿ ಹಳದಿ ರೋಗಗಳು ಬರುತ್ತಾ ಉಂಟು. ಇದರ ಬಗ್ಗೆ ತಾವು ಏನು ಸಂಶೋಧನೆಯನ್ನು ಮಾಡುತ್ತಿದ್ದೀರಿ. ಇದರ ಬಗ್ಗೆ ಏನು ವ್ಯವಸ್ಥೆ ಉಂಟು. ಇದನ್ನು ಹೊರ ದೇಶಗಳಿಗೆ ಗುಲಾಬಿ ಹಾಗೆ ರಫ್ತು ಮಾಡುವುದಕ್ಕೆ ತಮ್ಮಲ್ಲಿ ಏನದಾರೂ ಕಾರ್ಯಕ್ರಮಗಳು ಉಂಟಾ ಅಥವಾ ಇದನ್ನು ಶೇಖರಣೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳು ಇದ್ದರೆ ಖಂಡಿತ ಗುಲಾಬಿ ಹೂವಿನ ಹಾಗೆ ಮಲ್ಲಿಗೆ ಹೂವುಗಳನ್ನು ಕೂಡ ರಫ್ತನ್ನು ಹೊರದೇಶಗಳಿಗೆ ಮಾಡಲಿಕ್ಕೆ ಸಾಧ್ಯತೆ ಉಂಟು ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ಜೊತೆಗೆ ಬಹುವಾರ್ಷಿಕ ತೋಟದ ಬೆಳೆಗಳಲ್ಲಿ ಅಂತರ

ಬೆಳೆಗಳಿಗೆ ಪ್ರೋತ್ಸಾಹ ಕೊಟ್ಟರೆ. ಹೆಚ್ಚು ಆದಾಯವನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯ ಉಂಟು. ಜನಸಂಖ್ಯೆ ಮತ್ತು ಆಹಾರದ ಉತ್ಪಾದನೆ ಜೊತೆಗೆ ಅಡಿಕೆ ತೋಟದಲ್ಲಿ ಮಲ್ಲಿಗೆ ಹೂವು ಬೆಳೆಯುವಂತಾದ್ದು ಅಥವಾ ಎಲೆಯ ಬೆಳೆ ತೆಗೆಯುವಂತಾದ್ದು ಮಾವಿನ ತೋಟಗಳಲ್ಲಿ ಮತ್ತು ಗೇರು ತೋಟಗಳಲ್ಲಿ ಪರ್ಯಾಯ ಸಂಶೋಧನೆ ಮಾಡಿ ಆಲ್ಲೂಗಡ್ಡೆ, ಹಲಸಂದಿ, ಬದನೆ ಇತ್ಯಾದಿ, ಬೆಳೆಗಳನ್ನು ತೆಗೆಯುವ ದಿಸೆಯಲ್ಲಿ ತಾವು ಹೆಚ್ಚು ಗಮನ ಕೊಟ್ಟರೆ ಖಂಡಿತ ನಮ್ಮ ಆದಾಯ ಹೆಚ್ಚು ತೆಗೆದುಕೊಳ್ಳುವುದಕ್ಕೆ ಸಾಧ್ಯತೆಯುಂಟು. ರೈತರಿಗೂ ಇದರಿಂದ ಹೆಚ್ಚು ಅನುಕೂಲವಾಗಬಹುದು ಅಂತ ನನ್ನ ಅನಿಸಿಕೆ. ಇದರ ಜೊತೆಗೆ ತಾವು ನಮ್ಮ ಜಿಲ್ಲೆಯವರಿಗೆ ಕೈ ಪಂಪನ್ನು ನಮ್ಮ ಜಿಲ್ಲೆಯವರಿಗೆ ಒದಗಿಸಿಕೊಟ್ಟಿದ್ದೀರಿ. ಆದರೆ ಕಳೆದ ಎರಡು ವರ್ಷಗಳಿಂದ ಅಡಿಕೆ ಬೆಳೆಗಾರರಿಗೋಸ್ಕರ ಇದನ್ನು ಒದಗಿಸಿಕೊಟ್ಟಿಲ್ಲ. ಆದರೆ ಇದರ ಬಗ್ಗೆ 1996-97 ಮತ್ತು 1997-98ರಲ್ಲಿ ಯಾವುದನ್ನೂ ಕೊಡಲಿಲ್ಲ. ಕೊಡುವುದಾದರೆ ತಾವು ಜೂನ್ ತಿಂಗಳಲ್ಲೇ ಅದನ್ನು ಒದಗಿಸಬೇಕು. ಬೇರೆ ತಿಂಗಳಲ್ಲಿ ಅದನ್ನು ಒದಗಿಸಿಕೊಟ್ಟರೆ ಏನೂ ಪ್ರಯೋಜನ ಇಲ್ಲ. ತಾವು ಸೆಪ್ಟಂಬರ್ ಅಕ್ಟೋಬರ್‌ನಲ್ಲಿ ಕೈ ಪಂಪನ್ನು ಒದಗಿಸಿದರೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಈ ಕಡೆ ಹೆಚ್ಚು ಗಮನ ಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ಕೃಷಿ ಸಹಾಯಕರ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಸಹಾಯಕರ ಹುದ್ದೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಖಾಲಿ ಇವೆ. ಆಯಾಯಾ ಜಿಲ್ಲೆಯಲ್ಲಿಯೇ ಕೃಷಿ ಸಹಾಯಕರನ್ನು ನೇಮಿಸಿದರೆ ಆಯಾಯಾ ಜಿಲ್ಲೆಯ ಮಣ್ಣಿನ ವ್ಯವಸ್ಥೆ ಗೊತ್ತಿರತಕ್ಕಂಥಾದ್ದು ಬೆಳೆ ವ್ಯವಸ್ಥೆ ಗೊತ್ತಿರತಕ್ಕಂಥವರನ್ನು ನೇಮಕ ಮಾಡಿದರೆ ಆ ಊರಿನ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಆ ಊರಿನ ಭಾಷೆ ಬರುವಂತಹ ಕೃಷಿ ಸಹಾಯಕರನ್ನು ನೇಮಕ ಮಾಡಿದರೆ ರೈತರಿಗೆ ಹೆಚ್ಚು ಬೆಳೆ ತೆಗೆಯುವುದಕ್ಕೆ ಸಾಧ್ಯತೆ ಆಗುತ್ತದೆ. ಅದರ ಜೊತೆಗೆ ಬೇರೆ ಬೇರೆ ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಕೊಡುವಲ್ಲಿ ನಮ್ಮ ಜಿಲ್ಲೆಯಲ್ಲಿ ಗಟ್ಟಿ ಮಣ್ಣು ಇರುವಂತಾದ್ದು ಹಾರೆ ಪಿಕಾಸಿಗಳೇ ಹೆಚ್ಚು ಅನುಕೂಲವಾಗುವಂತಾದ್ದು. ಆ ದೃಷ್ಟಿಯಲ್ಲಿ ತಾವು ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು ಹೇಳಿ ಡ್ರಿಪ್ ಇರಿಗೇಷನ್ ಬಗ್ಗೆ ತಾವು ಒಂದು ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದರಲ್ಲಿ ಕೆಲವು ನಾರಂಗಳನ್ನು ಹಾಕಿದ್ದೀರಿ. ಮಹಿಳೆಯರಿಗೆ ಶೇಕಡ 80. ಎಸ್‌ಸಿ ಮತ್ತು ಎಸ್‌ಟಿ ಯವರಿಗೆ ಶೇಕಡ 30 ಎಂದು ಹೇಳಿ ಇದೆ. ಇದನ್ನು ತೆಗೆದು ಚಿಕ್ಕ ರೈತರು ಮತ್ತು ದೊಡ್ಡ ರೈತರು ಎಂದು ವಿಂಗಡಣೆ ಮಾಡಿದರೆ ಚಿಕ್ಕ ರೈತರಿಗೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಅನುಕೂಲವಾಗುತ್ತದೆ. ಇಲ್ಲದಿದ್ದರೆ ತಾವು ಕೊಟ್ಟ 5 ಲಕ್ಷ ರೂಪಾಯಿಗಳನ್ನು ಯಾರಾದರೂ ಒಬ್ಬರೋ ಅಥವಾ ಇಬ್ಬರೋ ದೊಡ್ಡ ರೈತರು ಉಪಯೋಗ ಮಾಡಿ ಬಾಕಿಯವರಿಗೆ ಸಿಗದೇ ಇರುವಂತಹ ಪರಿಸ್ಥಿತಿ ಆಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ : ಎಸ್‌ಸಿ/ಎಸ್‌ಟಿ ಮತ್ತು ಮಹಿಳೆಯರಿಗೆ 90 ಪರ್ಸೆಂಟ್ ಇತರರಿಗೆ 70 ಪರ್ಸೆಂಟ್.

ಶ್ರೀ ಕೆ. ಜಯರಾಮಶೆಟ್ಟಿ : ತಮ್ಮ ವಾರ್ಷಿಕ ಪುಸ್ತಕದಲ್ಲಿ ನಾನು ಆ ತರಹ ಓದಿದ ನೆನಪು. ತಾವು ಇದರ ಬಗ್ಗೆ ಒಂದು ವ್ಯವಸ್ಥಿತವಾದ ನಿಯಮಾವಳಿಗಳನ್ನು ರೂಪಿಸಿ ಹೆಚ್ಚು ಸಬ್ಸಿಡಿಯನ್ನು

ಕೊಟ್ಟರೆ ಅನುಕೂಲವಾಗಬಹುದು. ಇನ್ನು ಕೊನೆಯದಾಗಿ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಮೊನುಗಾರರ ಬಗ್ಗೆ ಹೇಳದಿದ್ದರೆ ಅದು ತಪ್ಪಾಗುತ್ತದೆಂದು ನನ್ನ ಅನಿಸಿಕೆ. ಮಾನ್ಯ ಮೀನುಗಾರಿಕಾ ಮಂತ್ರಿಗಳು ಇದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ನಾಲ್ಕೂವರೆ ಲಕ್ಷ ಜನ ಮೊನುಗಾರಿಕೆಯನ್ನು ನಂಬಿಕೊಂಡಿರುವ ಜನ ಇದ್ದಾರೆ. ನಾನು ಹೇಳಿದ್ದನೇ ಹೇಳದೆ ಈ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಹೂಳು ಎತ್ತುವ ಕಾಮಗಾರಿ ಬಗ್ಗೆ ಹೆಚ್ಚು ಗಮನ ಕೊಡಬೇಕು. ಮಂಗಳೂರು ಬಂದರು ಪ್ರದೇಶದಲ್ಲಿ ಅಥವಾ ಕರಾವಳಿ ಬಂದರು ಪ್ರದೇಶದಲ್ಲಿ ಎರಡು ಮೂರು ವರ್ಷಗಳ ಮುಂಚೆ ಒಂದು ಸಾರಿ ಹೂಳು ಎತ್ತುವ ಕಾಮಗಾರಿಯನ್ನು ಅಳವಡಿಸಲಾಗಿತ್ತು. ಆ ಹೂಳನ್ನು ತೆಗೆದು ಮೇಲಗಡೆ ಹಾಕಿದ್ದಾರೆ. ಅದು ಮಳೆ ಬಂದಾಗ ಸಮುದ್ರ ಸೇರಿಕೊಂಡು ಪುನಃ ಬೋಟ್‌ಗಳಿಗೆ ಹೋಗುವುದಕ್ಕೆ ಮತ್ತು ಬರುವುದಕ್ಕೆ ತೊಂದರೆ ಆಗುವುದರಿಂದ ತಾವು ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ತಾವು ಸಣ್ಣ ಸಣ್ಣ ಜಟ್ಟಿನಿರ್ಮಾಣ ಮಾಡಿ ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಅದು ಇನ್ನೂ ಕೂಡ ಕಾರ್ಯಗತ ಆಗಿಲ್ಲ. ಮಲ್ಪೆ ಎರಡನೇ ಹಂತದ ಕಾಮಗಾರಿಯ ಬಗ್ಗೆ ಎರಡು ಕೋಟಿ ರೂಪಾಯಿಗಳು ಖರ್ಚಾಗಿದೆ ಅಂತ ಹೇಳಿದ್ದೀರಿ ಅದರಲ್ಲಿ ತಾವು ಪಾವತಿ ಮಾಡಿರುವುದು ಕೇವಲ 50 ಲಕ್ಷ ಮಾತ್ರ. ಇನ್ನು ಒಂದೂವರೆ ಕೋಟಿ ರೂಪಾಯಿಗಳ ಪಾವತಿಗೋಸ್ಕರ ಬಾಕಿ ಉಂಟು. ಡೀಸಲ್ ಸಬ್ಸಿಡಿ ಬಗ್ಗೆ 12 ವರ್ಷಗಳ ಹಿಂದೆ ಕೊಟ್ಟ ಡೀಸೆಲ್ ಸಬ್ಸಿಡಿಯನ್ನೇ ತಾವು ಇನ್ನೂ ಮುಂದುವರಿಸುತ್ತಿದ್ದೀರಿ. ರೈತರು ತಮಗೆ ಪದೇ ಪದೇ ಮನವಿಯನ್ನು ಕೊಡುತ್ತಿದ್ದಾರೆ. ಆದರೆ, ನಾವೀಗ ತಮ್ಮಲ್ಲಿ ಇಷ್ಟೇ ವಿನಂತಿ ಮಾಡುತ್ತಿದ್ದೇನೆ. ನಿಮ್ಮ ಡೀಸೆಲ್ ಸಬ್ಸಿಡಿ ಖಂಡಿತವಾಗಿಯೂ ಬೇಡ. ಆದರೆ, ನೀವು ಹಾಕಿರತಕ್ಕ ಮಾರಾಟ ತೆರಿಗೆಯನ್ನು ರದ್ದುಮಾಡಿ. ಯಾವುದೇ ರೀತಿಯ ಡೀಸೆಲ್ ಸಬ್ಸಿಡಿಯನ್ನು ಈಗ ಮೀನುಗಾರರು ಅಪೇಕ್ಷಿಪಡುತ್ತಾ ಇಲ್ಲ. ನಿಮ್ಮ ಮಾರಾಟ ತೆರಿಗೆ ಏನುಂಟು, ಅದನ್ನು ರದ್ದು ಮಾಡಿ, ಮೀನುಗಾರರಿಗೆ ನೇರವಾಗಿ ಆ ದರದಲ್ಲಿ ಡೀಸೆಲ್ ಕೊಟ್ಟರೆ, ಖಂಡಿತವಾಗಿಯೂ ಇದಕ್ಕಿಂತ ಹೆಚ್ಚು ಅನುಕೂಲವಾಗಬಹುದೆಂದು ನನ್ನ ಅನಿಸಿಕೆ. ಮತ್ತೆ ಕರಾವಳಿ ನಿಯಂತ್ರಣ ವಲಯ 1 ಮತ್ತು 2 ಎಂದು ಮಾಡಿಕೊಂಡಿದ್ದೀರಿ. ಕರಾವಳಿ ನಿಯಂತ್ರಣ ವಲಯ 1ರ ಅಡಿಯಲ್ಲಿ 500 ಮೀಟರ್‌ನೊಳಗೆ ಯಾವುದೇ ಮನೆಗಳು, ಕಟ್ಟಡಗಳು ಇರಬಾರದು ಎಂದು ಇದೆ. ಆನಂತರ, ಕರಾವಳಿ ನಿಯಂತ್ರಣ ವಲಯ 2ರಲ್ಲಿ ನಗರ ಪ್ರದೇಶದಲ್ಲಿ ಬಿಟ್ಟು ಬಾಕಿಯವರು ಮನೆಗಳನ್ನು ಕಟ್ಟಿಕೊಳ್ಳುವಂತಾದ್ದು.....

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕರಾವಳಿ ನಿಯಂತ್ರಣ ವಲಯ ಕೇಂದ್ರದಲ್ಲಿ ಮಾಡುವಂಥಾದ್ದು ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ : ತಾವು ಕರ್ನಾಟಕ ಸರ್ಕಾರದಲ್ಲಿ ಮೀನುಗಾರಿಕಾ ಮಂತ್ರಿಗಳಾಗಿದ್ದೀರಿ. ನಾವು ಕೇಂದ್ರ ಸರ್ಕಾರವನ್ನು ಕೇಳುವುದಕ್ಕೆ ಬರುವುದಿಲ್ಲ. ರಾಜ್ಯ ಸರ್ಕಾರದವರು ಕೇಳಬೇಕು. ನಾನು ಶಾಸಕ ಇರಬಹುದು. ಆದರೆ ಏನು ಕೇಳಬೇಕಾದರೂ ನಿಮ್ಮ ಮುಖಾಂತರ ಆಗಬೇಕು. ಆದ್ದರಿಂದ ತಮ್ಮನ್ನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೇಂದ್ರದಲ್ಲಿ ಹಿಂದೆ ನಮ್ಮ ಸರ್ಕಾರವಿದ್ದಾಗ, ರಾಜ್ಯಸಭೆಯಲ್ಲಿ ಪಾಸ್ ಮಾಡಿತ್ತು. ಅದನ್ನು ತಾವು ಈಗ ಲೋಕಸಭೆಯಲ್ಲಿ ಪಾಸ್ ಮಾಡಿಸಿಕೊಟ್ಟರೆ ಸುಲಭವಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ತಮ್ಮೊಟ್ಟಿಗೆ ನಾನೂ ಬರುತ್ತೇನೆ, ಒಟ್ಟಿಗೆ ಹೋಗಿ ಮಾತನಾಡೋಣ ಇದರ ಬಗ್ಗೆ ಹೆಚ್ಚು ನಿಗಾ ಕೊಡಬೇಕಾದವರು ಸಂಬಂಧಪಟ್ಟ ಮಂತ್ರಿಗಳು. ಇವತ್ತು ಕಂದಾಯ ಪ್ರದೇಶದ ನಕ್ಷೆಯಲ್ಲಿ ಖಾಲಿ ಪ್ರದೇಶಗಳು ಹಾಗೆಯೇ ಬಾಕಿ ಇವೆ. ನಿಮ್ಮ ಲೆಕ್ಕಾಚಾರದ ಪ್ರಕಾರ ಅದೆಲ್ಲಾ 2ನೇ ವಲಯದಲ್ಲಿ ಬರುವುದರಲ್ಲಿ ಮೀನುಗಾರರ ಮನೆಗಳಿಗೆ ತೊಂದರೆಯಾಗದಂತೆ ಈ ವಲಯದಲ್ಲಿ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಎಲ್ಲಾ ಕರಾವಳಿ ಪ್ರದೇಶವನ್ನೂ ತಾವು 2ನೇ ವಲಯಕ್ಕೆ ಸೇರಿಸಿ, ಮೀನುಗಾರರಿಗೆ ರಕ್ಷಣೆ ಕೊಡಬೇಕೆಂದು ಮತ್ತು ನಿಮ್ಮಿಂದ ಸಹಕಾರ ಸಿಗಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ಗಿಲ್ಲಟ್ ಮೀನುಗಾರರು ಇದ್ದಾರೆ. ಈ ಸಾಂಪ್ರದಾಯಿಕ ಮೀನುಗಾರರು ಸುಮಾರು 2-3 ಸಾವಿರ ದೋಣಿಗಳು ಈ ಗಿಲ್ಲಟ್ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಇವರಿಗೆ ಸೀಮೆ ಎಣ್ಣೆಯನ್ನು ಪಡಿತರ ವ್ಯವಸ್ಥೆಯಲ್ಲಿ ಕೊಡಬೇಕಾಗುತ್ತದೆ. ಆದರೆ, ಇವತ್ತಿನವರೆಗೆ ಕರ್ನಾಟಕ ಸರ್ಕಾರದವರು ಇವರಿಗೆ ಪಡಿತರ ವ್ಯವಸ್ಥೆಯಲ್ಲಿ ಸೀಮೆ ಎಣ್ಣೆಯನ್ನು ಒದಗಿಸುತ್ತಾ ಇಲ್ಲ. ಸಾಮಾನ್ಯರಿಗೆ ಸಿಗತಕ್ಕ ಪಡಿತರ ವ್ಯವಸ್ಥೆಯಲ್ಲಿ ಮೀನುಗಾರರಿಗೂ ಸೀಮೆಎಣ್ಣೆಯನ್ನು ಒದಗಿಸಿ ಕೊಡಬೇಕು. ಮತ್ತು ಕೇಂದ್ರ ಸರ್ಕಾರದಿಂದ ಸಿಗುವಂಥ ಎಲ್ಲಾ ಸೌಲಭ್ಯಗಳನ್ನೂ ತಾವು ಉಪಯೋಗ ಮಾಡಿಕೊಳ್ಳಬೇಕು. ಕೇರಳ ರಾಜ್ಯದಲ್ಲಿ ಮಾಡಿಕೊಂಡಿದ್ದಾರೆ ಹಾಗೆಯೇ ಇತರ ರಾಜ್ಯಗಳವರೂ ಮಾಡಿಕೊಂಡಿದ್ದಾರೆ. ಆದರೆ, ನಮ್ಮ ರಾಜ್ಯ ಇನ್ನೂ ಇದನ್ನು ಮಾಡಿಕೊಂಡಿಲ್ಲ. ಒಂದು ದೋಣಿಗೆ ಒಂದು ದಿವಸಕ್ಕೆ 40 ಲೀಟರ್ ಸೀಮೆ ಎಣ್ಣೆ ಬೇಕಾಗಿರುವುದರಿಂದ ರಾಜ್ಯ ಸರ್ಕಾರ ಇದರ ಬಗ್ಗೆ ಒತ್ತುಕೊಡಬೇಕು. ಹಣವಂತರು ಬೇರೆ ರೀತಿಯಲ್ಲಿ ಹೋಗುತ್ತಾರೆ. ಸಾಂಪ್ರದಾಯಿಕ ದೋಣಿಯಲ್ಲಿ ಮೀನುಗಾರಿಕೆ ಮಾಡಬೇಕಾದರೆ 60-70 ಸಾವಿರ ಬೇಕಾಗುತ್ತದೆ. ಇದು ಬಡವರಿಗೆ ಕಷ್ಟವಾಗುತ್ತದೆ. ಆದ್ದರಿಂದ ನಾನು ಮಾನ್ಯ ಕೃಷಿ ಸಚಿವರ ಹತ್ತಿರ ಕಡ್ಡಾಯವಾಗಿ ವಿನಂತಿ ಮಾಡುತ್ತೇನೆ. ಅವರು ಕೃಷಿ ನೀತಿಯನ್ನು ಪ್ರಕಟಿಸಿದ್ದಾರೆ. ಮತ್ತು ನನ್ನ ಪ್ರಶ್ನೆಗೆ ಉತ್ತರವನ್ನೂ ಕೊಟ್ಟಿದ್ದಾರೆ. 14 ಪಾಯಿಂಟ್‌ಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಹೇಳಿದ್ದಾರೆ. ಆದರೆ, ಇವೆಲ್ಲವನ್ನೂ ಅನುಷ್ಠಾನಗೊಳಿಸುವುದಕ್ಕೆ ಏನು ಮಾಡಿದ್ದಾರೆಂದು ಕೇಳುತ್ತೇನೆ. ಕೃಷಿ ನೀತಿಯನ್ನು ಪ್ರಕಟಣೆ ಮಾಡಿ ಈಗಾಗಲೇ ಎರಡು ವರ್ಷವಾಯಿತು. ಕೃಷಿಯನ್ನು ಕೈಗಾರಿಕೆಯಾಗಿ ಪರಿವರ್ತನೆ ಮಾಡುವುದು ಮತ್ತು ಖಾಸಗಿ ವಲಯಗಳಿಗೆ ಪ್ರೋತ್ಸಾಹ ನೀಡುವುದು ಇತ್ಯಾದಿ 14 ವಿಚಾರಗಳಲ್ಲಿ ಎಷ್ಟು ಕಾರ್ಯಗತಗೊಳಿಸಿದ್ದಾರೆ. ಇವು ಕೇವಲ ಪುಸ್ತಕದಲ್ಲಿ ಇವೆ. ಇವುಗಳನ್ನು ಪ್ರಚಾರಕ್ಕೋಸ್ಕರ ಉಪಯೋಗ ಮಾಡುವುದಲ್ಲ. ಕೃಷಿ ನೀತಿಯನ್ನು ಪ್ರಕಟಣೆ ಮಾಡಿದ ನಂತರ, ಅದನ್ನು ಅನುಷ್ಠಾನಗೊಳಿಸಬೇಕು. ಹಾಗೆಯೇ ಮೀನುಗಾರರನ್ನು ಪರಿಶಿಷ್ಟಜಾತಿಗೆ ಸೇರಿಸುತ್ತೇವೆಂದು ಹೇಳಿದ್ದರು, ಇದು ಇವತ್ತಿನವರೆಗೆ ಅನುಷ್ಠಾನಕ್ಕೆ ಬಂದಿಲ್ಲ. ಮೀನುಗಾರಿಕೆಯನ್ನು ಕೃಷಿ ಉದ್ದಿಮೆಯಾಗಿ ಇಟ್ಟುಕೊಳ್ಳುತ್ತೇವೆಂದು ಹೇಳಿದ್ದಾರೆ, ಇದೂ ಕೂಡ ಅನುಷ್ಠಾನಕ್ಕೆ ಬರಲಿಲ್ಲ. ದಯವಿಟ್ಟು ತಾವು ಇದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ನಿಜವಾದ

ರೀತಿಯಲ್ಲಿ ರೈತರಿಗೆ ಸಹಾಯವಾಗುವಂತೆ ಮಾಡಬೇಕು. ಮೀನುಗಾರಿಕೆಯಾಗಲೀ, ಪಶುಸಂಗೋಪನೆಯಾಗಲೀ ಅಥವಾ ತೋಟಗಾರಿಕೆಯಾಗಲೀ ನಿಜವಾಗಿ ರೈತರ ಬವಣೆಯನ್ನು ನಿವಾರಿಸುವ ದೃಷ್ಟಿಯಲ್ಲಿ ರಾಜ್ಯ ಸರ್ಕಾರ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡಬೇಕೆಂದು ಹೇಳಿ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಉಪ ಮಂತ್ರಿಗಳಿಗೆ ಬಹಳ ಆಶ್ಚರ್ಯ. ಸುರೇಶ್‌ಕುಮಾರ್ ಅವರಿಗೂ ವ್ಯವಸಾಯಕ್ಕೂ ಏನು ಸಂಬಂಧ ಎಂದು. ಮೀನುಗಾರಿಕೆ, ಪಶುಸಂಗೋಪನೆ ಇದು ಯಾವುದೂ ಬೆಂಗಳೂರು ನಗರದವರಿಗೆ ಸಂಬಂಧ ಇಲ್ಲ. ಏಕೆ ಮಾತನಾಡುತ್ತಿದ್ದಾರೆಂದು ಸಹಜವಾಗಿ ಅವರಿಗೆ ಅನಿಸಿದೆ. ಮಾನ್ಯ ಅಧ್ಯಕ್ಷರೇ, ನಾನು ಸೀಮಿತ ಉದ್ದೇಶಕ್ಕೋಸ್ಕರ ಇಲ್ಲಿ ನಿಂತಿದ್ದೇನೆ. ಇಲ್ಲಿ ಅನೇಕ ಪ್ರಮುಖರು ಮಾತನಾಡಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ವಿಶೇಷವಾಗಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಮುದ್ದಹನುಮೇಗೌಡರು ಸಿರಿಕಲ್ಚರ್ ಬಗ್ಗೆ ಮಾತನಾಡಿದ್ದಾರೆ. ಹಾಗೆಯೇ ನಮ್ಮ ಸ್ನೇಹಿತರಾದ ಜಯರಾಮಶೆಟ್ಟಿಯವರೂ ಮಾತನಾಡಿದ್ದಾರೆ. ನಾನು ಈ ಯಾವುದೇ ಇಲಾಖೆಗಳ ಬಗ್ಗೆ ಪಾರಂಗತ ಅಲ್ಲ. ಆದರೆ, ಪಶುಸಂಗೋಪನಾ ಇಲಾಖೆಯಲ್ಲಿ ಈ ಮೂಕ ಪ್ರಾಣಿಗಳ ಹೆಸರಿನಲ್ಲಿ ಇವತ್ತು ಅನ್ಯಾಯವಾಗಿದೆ. ಈ ಮೂಕ ಪ್ರಾಣಿಗಳಿಗೆ ಬಾಯಿ ಇಲ್ಲ ಮತ್ತು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಈ ಪ್ರಾಣಿಗಳ ಹೆಸರಿನಲ್ಲಿ ಏನು ಅನ್ಯಾಯವಾಗಿದೆ, ಅದನ್ನು ಸದನದ ಮುಂದೆ ಇಡುವುದಕ್ಕೆ, ಈ ಸೀಮಿತ ಉದ್ದೇಶಕ್ಕೋಸ್ಕರ ನಿಂತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು 8-10 ನಿಮಿಷಕ್ಕಿಂತ ಜಾಸ್ತಿ ತೆಗೆದುಕೊಳ್ಳುವುದಿಲ್ಲ. ನಾನು 28ನೇ ತಾರೀಖು ಈ ಸದನದಲ್ಲಿ ಶೂನ್ಯವೇಳೆಯ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ನಾವು ಇತಿಹಾಸದಲ್ಲಿ ಓದಿದ್ದೇವೆ. ಮೊಗಲರ ದೊರೆ ಜಹಾಂಗೀರ್ ಎಂದು ಇದ್ದರು, ಅವರ ಆಸ್ಥಾನದಲ್ಲಿ ನಾಗರೀಕರು ನ್ಯಾಯ ಕೇಳುವುದಕ್ಕೋಸ್ಕರ ಒಂದು ಗಂಟೆ ಇದ್ದಿತಂತೆ. ಒಂದು ದಿವಸ ಒಂದು ಒಂಟೆ ಬಂದು ಆ ಗಂಟೆಯನ್ನು ಎಳೆಯುತ್ತಿತ್ತು. ಏಕೆಂದರೆ, ನನ್ನ ಯಜಮಾನ ನನ್ನನ್ನು ಸರಿಯಾಗಿ ಸಾಕಿಲ್ಲ ಎಂದು. ಪ್ರಾಯಶಃ ವಿಧಾನ ಸೌಧದಲ್ಲೂ ಅಂತಹ ಗಂಟೆಯನ್ನು ಕಟ್ಟಿದ್ದರೆ, ಪಶುಸಂಗೋಪನಾ ಇಲಾಖೆಯಲ್ಲಿ ಆಗಿರತಕ್ಕಂಥ ಅನ್ಯಾಯದಿಂದ, ಆ ಪ್ರಾಣಿಗಳು ಬಂದು ಗಂಟೆಯನ್ನು ಎಳೆಯುತ್ತಿದ್ದವು ಈ ಮಾತನ್ನು ನಾನೇಕೆ ಹೇಳುತ್ತಿದ್ದೇನೆಂದರೆ, ನಾವು ಅನೇಕ ರೀತಿಯ ಅವ್ಯವಹಾರಗಳನ್ನು ನೋಡಿದ್ದೇವೆ. ಕೇಳಿದ್ದೇವೆ. ಆದರೆ, ಇದು ಬಹಳ ವಿಚಿತ್ರವಾದುದು. ಮಾನ್ಯ ಉಪಮುಖ್ಯಮಂತ್ರಿಗಳು ಸದನದಲ್ಲಿರುವುದು ನನಗೆ ಬಹಳ ಸಂತೋಷ ತಂದಿದೆ. ಈ ಸಂದರ್ಭದಲ್ಲಿ ಅವರು ದಯವಿಟ್ಟು ನೋಡಬೇಕು. ಅವರು ಕಷ್ಟಪಟ್ಟು ಆ ಟ್ಯಾಕ್ಸ್, ಈ ಟ್ಯಾಕ್ಸ್ ಎಂದು ತಂದುಕೊಡುತ್ತಾರೆ. ಅದು ಯಾವುದಕ್ಕೋಸ್ಕರ ಉಪಯೋಗವಾಗುತ್ತಿದೆ. ಲಂಗು ಲಗಾಮು ಇಲ್ಲದೆ ಆಗುತ್ತಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ದಿನಾಂಕ 17-3-98 ಅಂದರೆ, 1997-98ರ ಆರ್ಥಿಕ ವರ್ಷ ಮುಗಿಯುವುದಕ್ಕೆ ಕೇವಲ 14 ದಿವಸಗಳು ಇತ್ತು. 17-3-98ರ ಬೆಳಿಗ್ಗೆ 10-30 ಗಂಟೆಗೆ ಮೀನುಗಾರಿಕೆ ಮತ್ತು ಪಶುಸಂಗೋಪನಾ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಪಶುಸಂಗೋಪನಾ ಇಲಾಖೆಗೆ ಬೇಕಾಗಿರತಕ್ಕ ಔಷದಿ ಮತ್ತು

ರಾಸಾಯನಿಕಗಳು ಆಸ್ಪತ್ರೆ ಪರಿಕರಗಳು ಇವುಗಳಿಗೆ ದರ ಗುತ್ತಿಗೆ ನಿಗದಿ ಮಾಡಲು ನೇಮಕಾತಿ ಮಾಡಿರತಕ್ಕ ಉನ್ನತ ಮಟ್ಟದ ಖರೀದಿ ಸಮಿತಿಯು ಸಭೆ ಸೇರಿ ನಡೆಸಿದ ನಡವಳಿಕೆಗಳು. 17-3-98ರ ಬೆಳಿಗ್ಗೆ ಸಭೆ ಆಯಿತು. ಅದರಲ್ಲಿ ಅನೇಕ ಸಂಗತಿಗಳ ನಡುವೆ ನಾನು ಒಂದೇ ಒಂದು ಸಂಗತಿಯನ್ನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ.

"ಪ್ರಸಕ್ತ ಸಾಲಿನ ಆರ್ಥಿಕ ವರ್ಷವು ಕೊನೆಗೊಳ್ಳುತ್ತಿರತಕ್ಕ ಹಿನ್ನೆಲೆಯಲ್ಲಿ ಹಾಗೂ ದರ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ನಾವು ದರ ಗುತ್ತಿಗೆ ನಿಗದಿ ಮಾಡಿಲ್ಲ. ಈ ವರ್ಷ ಮುಕ್ತಾಯವಾಗುತ್ತಿದೆ, ಅದಕ್ಕೋಸ್ಕರ, 2ನೇ ಅರ್ಧವಾರ್ಷಿಕದಲ್ಲಿ ಔಷಧಿ, ರಾಸಾಯನಿಕಗಳನ್ನು ಖರೀದಿ ಮಾಡಲು ಮೀಸಲಿಟ್ಟಿರುವ 2 ಕೋಟಿ 21 ಲಕ್ಷ, 20 ಸಾವಿರದ 150 ರೂ.ಗಳು. ಇದು ಯೋಜನೇತರ ಮತ್ತು ಯೋಜನೆ ವೆಚ್ಚ ಮಾಡುವ ರೀತಿಯ ಬಗ್ಗೆ. ಇದನ್ನು ನಾವು ಹೇಗೆ ಖರ್ಚು ಮಾಡಬೇಕು? ಇನ್ನು 13 ದಿವಸ ಇದೆ. 2 ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡೋಣ ಎಂದು ಯೋಚನೆ ಬಂತು. ಜಿಜ್ಞಾಸೆ ಇದರಿಂದ ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯನ್ನು ಕೋರುತ್ತಾರೆ. 2 ಕೋಟಿ 20 ಲಕ್ಷ ಏನು ಉಳಿದಿದೆ, ಇದಕ್ಕೆ ದರ ಗುತ್ತಿಗೆ ನಿಗದಿಯಾಗಿಲ್ಲವೆಂದು ಕೋರುತ್ತಾರೆ. ಈ ರೀತಿ ಕೇಳಿದಾಗ ಮೀಸಲಿಟ್ಟಿರುವ ಹಣವನ್ನು ಅಧ್ಯರ್ಪಣೆ ಮಾಡಬೇಕಾಗಿರುವುದಾಗಿಯೂ, ಸರಂಡರ್ ಮಾಡಬೇಕಾಗಿರುವುದು ಹಾಗೂ 1998-99ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲಾದ ಹಣದಲ್ಲಿ ಖರೀದಿಸಬಹುದಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ತಿಳಿಸಿದರು. ನಮ್ಮಲ್ಲಿ ಒಂದು ಕೆಟ್ಟ ಪದ್ಧತಿ ಬಂದಿದೆ. ಅದೇನೆಂದರೆ, ಪ್ರೊಫಾರ್ಮ ಇನ್‌ವಾಯ್ಸ್ ತೆಗೆದುಕೊಳ್ಳುವುದು. ಈ ಪ್ರೊಫಾರ್ಮ ಇನ್‌ವಾಯ್ಸ್ ಎಂದರೆ, obtaining bill from the Firms without actual supplies to utilise the amount before the end of the financial year. ಆ ಜಂಟಿ ಕಾರ್ಯದರ್ಶಿಯವರು ಬಹಳ ಚೆನ್ನಾಗಿ ಹೇಳಿದರು. Under no circumstances, proforma invoice should be obtained to utilise this amount before 31.3.1998 since it would amount to financial impropriety. ಹಣಕಾಸಿನ ಇಲಾಖೆಯವರನ್ನು ನೀವು ಕರೆಸಿದ್ದಿರಿ, ಬಂದು ಕುಳಿತ್ತಿದ್ದರು. ನೀವು ಅಭಿಪ್ರಾಯವನ್ನು ಕೇಳಿದಿರಿ, ಅವರು ಅಭಿಪ್ರಾಯವನ್ನು ಕೊಟ್ಟರು. ದಯಮಾಡಿ ಈ ಪ್ರೊಫಾರ್ಮ ಇನ್‌ವಾಯ್ಸ್ ತೆಗೆದುಕೊಳ್ಳಬೇಡಿ. It is a financial impropriety. ಆದರೆ, ಏಕೋ ಇಲಾಖೆಯಲ್ಲಿ 9 ದಿವಸದಲ್ಲೇ ತಳಮಳವಾಯಿತು. ಇದು ಆಗಿದ್ದು 17-3-98. 26-3-98ಕ್ಕೆ ಸರಿಯಾಗಿ 9 ದಿವಸಕ್ಕೆ ಬೆಳಿಗ್ಗೆ 11-30 ಗಂಟೆಗೆ ಮತ್ತೆ ಒಂದು ಸಭೆ ಸೇರಿತು. ಉನ್ನತ ಮಟ್ಟದ ಖರೀದಿ ಸಮಿತಿಯ ಸಭೆ.

7.00 ಪಿ.ಎಂ.

ಆ ಸಭೆಯಲ್ಲಿ ಜಂಟಿ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಬೆಂಗಳೂರು ಅವರು ಇರಲಿಲ್ಲ. ಅವರು ಮುಂಚಿತವಾಗಿಯೇ ಸಭೆಯಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಾಯಶಃ

ಉಪ ಮುಖ್ಯಮಂತ್ರಿಗಳಿಗೆ ಜ್ಞಾಪಕ ಇರಬಹುದು. ಮಾರನೇ ದಿವಸ ಬಜೆಟ್ ಮಂಡಿಸುವುದು ಏನೋ ಇತ್ತು ಅವರು ಆ ಮೀಟಿಂಗ್‌ಗೆ ಹೋಗಿಬಿಟ್ಟರು. ಇನ್ನೊಂದು ಮೀಟಿಂಗ್‌ಗೆ. ಈ ಮೀಟಿಂಗ್‌ನಲ್ಲಿ ಮಾತನಾಡುತ್ತಾ 10ನೇ ಪಾಯಿಂಟ್ ಪಶುಸಂಗೋಪನಾ ಇಲಾಖೆಯ ನಿರ್ದೇಶಕರು ಹೇಳುತ್ತಾರೆ. ಮಾರ್ಚ್ 98 ರ ಕೊನೆಯ ವಾರದಲ್ಲಿ ಒಪ್ಪಿಗೆ ಆಗುತ್ತಿರುವುದರಿಂದ ಪ್ರೊಫಾರ್ಮ್ ಇನ್‌ವಾಯ್ಸ್ ಮೂಲಕ ತೆಗೆದುಕೊಳ್ಳದೇ ಹೋದರೆ ಹಣ ಈ ವರ್ಷ ಉಪಯೋಗಿಸಿಕೊಳ್ಳದೇ ಖೋತಾ ಆಗುತ್ತದೆಂದು ಹಾಗೂ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಔಷಧಿಗಳಿಗೆ ಕೊಟ್ಟಿರುವ ಹಣ ಕಡಿಮೆ ಇದ್ದು ಆದ್ದರಿಂದ ಪ್ರೋಫಾರ್ಮ ಇನ್‌ವಾಯ್ಸ್ ಮೂಲಕ ಔಷಧಿಗಳನ್ನು ತೆಗೆದುಕೊಳ್ಳಲು ನಿರ್ದೇಶಕರಿಗೆ ಅನುಮತಿ ನೀಡಬೇಕೆಂದು ತಿಳಿಸಿದ್ದಾರೆ. ಆಗ ಅದನ್ನು ಅವರು ಪರಿಗಣಿಸಿ ಒಪ್ಪಲಾಯಿತು. ಇದು ಹೇಗೆ ಅಂದರೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ, ನಮ್ಮ ಸರ್ಕಾರಿ ಅಧಿಕಾರಿಗಳಲ್ಲಿ ಒಂದು ಧೋರಣೆ ಇದೆ. ಅವರ ಖಾತೆಯಲ್ಲಿ ಸಿ ಎಲ್ ಏನಾದರೂ ಇದ್ದರೆ ಅವರು ಡಿಸೆಂಬರ್‌ನಲ್ಲಿ ಒಂದೇ ಸಾರಿ 8-10 ದಿವಸ ಸಿ ಎಲ್ ತೆಗೆದುಕೊಳ್ಳುತ್ತಾರೆ. ಲ್ಯಾಪ್ಸ್ ಆಗಬಾರದು ಎಂದು. ಸಿ ಎಲ್ ಅನ್ನು ನಾವು ಖರ್ಚು ಮಾಡದೇ ಇದ್ದರೆ ನಮ್ಮದು ಏನೋ ಕಳೆದು ಹೋಗುತ್ತದೆ ಎಂದು ರಜೆ ಹೇಗೆ ಲ್ಯಾಪ್ಸ್ ಆಗಬಾರದು ಎಂದು ಒಟ್ಟಿಗೆ ರಜೆ ಹಾಕುತ್ತಾರೋ ಕಛೇರಿಗೆ ಬರುವುದಿಲವೋ ಹಾಗೆ ಲ್ಯಾಪ್ಸ್ ಆಗುತ್ತದೆ. ಈ ಅಮೌಂಟ್‌ನಿಂದ ಏನು ತೆಗೆದುಕೊಳ್ಳಬೇಕು ಎನ್ನುವುದು ಅಲ್ಲ. ಮುಖ್ಯ ತೆಗೆದುಕೊಳ್ಳಬೇಕು ಆಷ್ಟೇ. ಅದಕ್ಕೋಸ್ಕರ ಪ್ರೊಫಾರ್ಮ ಇನ್‌ವಾಯ್ಸ್ ಮುಖಾಂತರ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿಬಿಟ್ಟರು. ಇದಾದ ನಂತರ ನನಗೆ ಬಹಳ ಆಶ್ಚರ್ಯ ಅನಿಸುವುದು ಅಂದರೆ 2.2 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿದ್ದರು, ಟೆಂಡರ್ ಕಂಟ್ರಾಕ್ಟ್ ಆಗಿರಲಿಲ್ಲ. ನಮ್ಮ ನಿರ್ದೇಶಕರು ಬಹಳ ಆಸಕ್ತಿ ವಹಿಸಿ 26 ನೇ ತಾರೀಖು ಆದ ಮೇಲೆ 26-27-28ನೇ ತಾರೀಖು ಓವರ್ ನೈಟ್ ಕೆಲಸ ಮಾಡಿ ಓವರ್ ಟೈಮ್ ಕೆಲಸ ಮಾಡಿ ಈ ರೇಟ್ ಕಂಟ್ರಾಕ್ಟನ್ನು ಇತ್ಯರ್ಥ ಮಾಡಿ 30 ನೇ ತಾರೀಖು ಒಳಗೆ ಎಲ್ಲಾ ಮಾಡಿ 31ನೇ ತಾರೀಖು ಬಿಲ್ಸ್‌ನ್ನು ತೆಗೆದುಕೊಂಡು ಕೌಂಟರ್ ಸಹಿ ಮಾಡಿ he presented them to the Treasury before 31.3.98. ಅವರು ಮಾಡಿದರು. ಈ ಕೆಲಸ ವರ್ಷವಿಡೀ ಮಾಡಿದರೆ ಬಹಳ ಸಂತೋಷವಾಗುತ್ತದೆ. ಆ ಮೂರು ದಿವಸದಲ್ಲಿ ಬಹಳ ಅದ್ಭುತವಾದ ಕೆಲಸ ಆಯಿತು. ಅನಿಮಲ್ ಅಡ್‌ಬೆಂಡ್ರಿ ಡಿಪಾರ್ಟ್‌ಮೆಂಟ್‌ನಲ್ಲಿ ನನಗೆ ಗೊತ್ತಿರುವ ಪ್ರಕಾರ ಯಾವ ರೀತಿಯ ಔಷದಿ ತೆಗೆದುಕೊಳ್ಳುತ್ತಾರೆ. ಅಂದರೆ ಡಿಸ್ಟ್ರಿಕ್ಟ್‌ಗಳಿಂದ ಇಂಡೆಂಟ್ಸ್ ತರಿಸುತ್ತಾರೆ. ನಿಮಗೆ ಏನೇನು ಔಷಧಿಗಳು ಬೇಕು ಎಂದು ಲಿಸ್ಟ್ ತರಿಸಿಕೊಳ್ಳುತ್ತಾರೆ. ಆದರೆ 31ನೇ ತಾರೀಖು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲೇಬೇಕು ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ. ಅದಕ್ಕೋಸ್ಕರ ಡಿಸ್ಟ್ರಿಕ್ಟ್‌ನಿಂದ ಇಂಡೆಂಟ್ಸ್ ತರಿಸಿಕೊಳ್ಳಲೇ ಇಲ್ಲ. ನಮ್ಮ ನಿರ್ದೇಶಕರೇ ಕುಳಿತುಕೊಂಡು ಒಂದು ಲಿಸ್ಟ್ ಮಾಡಿದರು, ನಾವು ಈ ಔಷಧಿಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹಿಂದೆ ಟೆಂಡರ್ ಕರೆದಿದ್ದು ಸುಮಾರು 103 ಐಟಂಗಳಿಗೆ. 103 ಐಟಂಗೆ 2.2 ಕೋಟಿ ರೂಪಾಯಿ. ಆದರೆ ಈ ನಿರ್ದೇಶಕರು ಪರ್ಚೇಸ್ ಮಾಡಿದ್ದು, ಕೇವಲ 36 ಐಟಂಗಳಿಗೆ 2.2 ಕೋಟಿ ರೂಪಾಯಿ. 103 ಐಟಂಗಳಿಗೆ 2.2 ಕೋಟಿ.

36 ಐಟಂಗಳಿಗೆ ಕೂಡ 2.2 ಕೋಟಿ. ಆ ಪ್ರಾಣಿಗಳ ದನಗಳ ಕಥೆ ಎನು? ನೀವು ಹೇಳಬಹುದು. ಎಲ್ಲಾ ಸರ್ಕಾರಿ ಮನುಷ್ಯರ ಆಸ್ಪತ್ರೆಗಳಲ್ಲಿ ಇದೇ ತರಹ ಇದೆ ನೀವು ಏಕೆ ಇದಕ್ಕೆ ತಲೆ ಕೆಡಿಸಿಕೊಳ್ಳುತ್ತೀರಿ ಎಂದು ಹೇಳಬಹುದು. ಆದರೆ ನಾವು ಈಗ ದನಗಳ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರಾಣಿಗಳ ಬಗ್ಗೆ ಮಾತನಾಡುತ್ತಿದ್ದೇವೆ. 36 ಐಟಂಗಳನ್ನು ತೆಗೆದುಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುವುದು ಇಷ್ಟೆ. ಮೊದಲನೆಯದು ಮಾರ್ಚ್ 31ನೇ ತಾರೀಖು ತೆಗೆದುಕೊಳ್ಳುವುದರ ಬದಲು ಏಪ್ರಿಲ್ ಮೊದಲನೇ ವಾರದಲ್ಲಿ ತೆಗೆದುಕೊಳ್ಳಬಹುದಿತ್ತು. ಹೊಸ ಗ್ರಾಂಟ್ ಬರುತ್ತಿತ್ತು. ಹೊಸ ವರ್ಷ ನಿಧಾನಕ್ಕೆ ರೇಟ್ ಕಂಟ್ರಾಕ್ಟ್ ಮಾಡಿಬಿಟ್ಟು ಡಿಸ್ಟ್ರಿಕ್ಟ್‌ಗಳಿಂದ ಲಿಸ್ಟ್ ತರಿಸಿಕೊಂಡು ಯಾವ ಖಾಯಿಲೆಗೆ ಯಾವ ಔಷಧಿ ಬೇಕು ಎಂದು ಹೇಳಿ ಪ್ರಾಣಿಗಳಿಗೆ ಬೇಕಾಗಿರುವಂತಹ ಔಷಧಿಯನ್ನು ತೆಗೆದುಕೊಳ್ಳಬೇಕೇ ಹೊರತು ಸರಬರಾಜುದಾರರಿಗೆ ಕೊಟ್ಟರೆ ನನಗೆ ಏನು ಸಿಗುತ್ತದೆ ಆ ಔಷಧಿಯನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಇರಲಿಲ್ಲ. ಲಿಸ್ಟ್ ತರಿಸಿಕೊಳ್ಳಬೇಕಾಗಿತ್ತು. ಅದನ್ನು ತರಿಸಿಕೊಳ್ಳಲಿಲ್ಲ. ಎರಡನೇಯದು ಬಹಳ ಮುಖ್ಯ ಅಂದರೆ ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ದೇಶದಲ್ಲಿ ಒಂದು ಇದೆ, ಯಾರ ಬಗ್ಗೆ ಆದರೂ ಚಾರ್ಜ್‌ಶೀಟ್ ಹಾಕಿದರೆ ಅವರ ರಾಜೀನಾಮೆ ಕೇಳಬೇಕು ಎಂದು ರಾಜಕೀಯ ವಲಯದಲ್ಲಿ. That has become the cry of he day. ಇಲ್ಲಿ ಒಂದು ಬಹಳ ವಿಶೇಷ. ನನಗೆ ಅನಿಸುವುದು. ಯಾರು ನಿರ್ದೇಶಕರು ಇದ್ದಾರೆ. ಅವರ ಬಗ್ಗೆ 1992-93, 1993-94, ಎರಡು ವರ್ಷ ಇದೇ ಅನಿಮಲ್ ಹಜ್‌ಬೆಂಡ್ರಿ ಡಿಪಾರ್ಟ್‌ಮೆಂಟ್‌ನಲ್ಲಿ ಇದೇ ಡ್ರಗ್ಸ್ ಪರ್ಚೇಸ್ ಆಗಿರುವ ಬಗ್ಗೆ ಅವ್ಯವಹಾರ ಆಗಿದೆ ಎಂದು ಲೋಕಾಯುಕ್ತ ವಿಚಾರಣೆ ನಡೆಯುತ್ತಿದೆ and in one case he has gone and taken an anticipatory bail. ಈ ರೀತಿಯ ಒಂದು ಪರಿಸ್ಥಿತಿ ಇರುವಾಗಲೂ ಕೂಡ ಈ ವರ್ಷ ಫಾರ್ಮಾ ಇನ್‌ವಾಯ್ಸ್ ತೆಗೆದುಕೊಳ್ಳಬಾರದು. ಅಮೌಂಟನ್ನು ನೀವು ಸರಂಡರ್ ಮಾಡಿಬಿಡಿ ಎಂದು ನಿರ್ದೇಶನ ಕೊಟ್ಟಿದ್ದರೂ ಕೂಡ ಅದೇ ವ್ಯಕ್ತಿ ಕೈಯಲ್ಲಿ ಜವಾಬ್ದಾರಿಯನ್ನು ಕೊಟ್ಟು 31ನೇ ತಾರೀಖು ಒಳಗಡೆ 2.2 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು. ಪ್ರಾಣಿಗಳ ಖಾಯಿಲೆಗೆ ಸಂಬಂಧವಿಲ್ಲದೇ ಇರುವ ಔಷಧಿಯನ್ನು ತೆಗೆದುಕೊಳ್ಳುವುದು, ಸರ್ಕಾರದ ಸಾರ್ವಜನಿಕರ ಹಣ ಲೂಟಿ ಎಂದು ಹೇಳಿದರೆ ಅದಕ್ಕೆ ಬೇರೆ ಪದ ಇದೆಯೇ? ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಮನಕ್ಕೆ ನಾನು ಇನ್ನೊಂದು ವಿಷಯ ತರುತ್ತೇನೆ. ತಾವು ಇದರ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ಒಳ್ಳೆಯದು. ಕರ್ನಾಟಕ ಷೀಪ್ ಅಂಡ್ ಷೀಪ್ ಪ್ರಾಡಕ್ಟ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಇದೆ. ಆ ಬೋರ್ಡ್ ಬಗ್ಗೆ 1995 ರಿಂದ 1997 ರವರೆಗೆ ಈ ಪುಣ್ಯಾತ್ಮ ಯಾರು ಒರು ದಿವಸದಲ್ಲಿ ಈ ರಾಜ್ಯವನ್ನು ಉಳಿಸುವ ಮಹಾನ್ ಕೆಲಸ ಮಾಡಿದರು. ಅವರೇ he as nominated as the Chairman of the Karnataka sheep & sheep products evelopment Board. ನನಗೆ ದಯವಿಟ್ಟು 1995, 1996, 1997ನೇ ಇಸವಿಯವರೆಗೂ ಆ ರಿಗಳಿಗೆ ಏನೇನು ಡ್ರಗ್ಸ್ ಪರ್ಚೇಸ್ ಮಾಡಿದ್ದಾರೆ, ಅದರ ಬಗ್ಗೆ ಆಗಿರುವ ಅವ್ಯವಹಾರಗಳ ಬಗ್ಗೆ ಕೂಡ ಅದರ ಬಗ್ಗೆ ತಾವು ಉನ್ನತವಾದ ಒಂದು ತನಿಖೆಯನ್ನು ಮಾಡಿಸಬೇಕು ಎಂದು ನು ಬಹಳ ಕಳಕಳಿಯಿಂದ ಒಂದು ರೀತಿಯಿಂದ ಇದನ್ನು ನಾನು ತಮ್ಮ ಆತ್ಮಸಾಕ್ಷಿಗೆ ಇದನ್ನು

ಬಿಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಬಹಳಷ್ಟು ಅಲಿಗೇಷನ್ಸ್ ಮಾಡುತ್ತೇವೆ. ಅವರೂ ಕೂಡ ಡಿನೈ ಮಾಡುತ್ತಾರೆ. ನಾನು ಮೂರು ಖಚಿತವಾದ ಸಂಗತಿಗಳನ್ನು ಹೇಳಿದ್ದೇನೆ. 17-3-98 ಯಾರೂ ಕೂಡ ಡಿನೈ ಮಾಡುವುದಕ್ಕೆ ಆಗುವುದಿಲ್ಲ. 26-3-98 ಯಾರೂ ಕೂಡ ಡಿನೈ ಮಾಡುವುದಕ್ಕೆ ಬರುವುದಿಲ್ಲ. 31-3-98 ಯಾರೂ ಕೂಡ ಡಿನೈ ಮಾಡುವುದಕ್ಕೆ ಆಗುವುದಿಲ್ಲ. 103 ಐಟಂಗಳು 2.2 ಕೋಟಿ, ಅದೇ 36 ಐಟಂಗಳು 2.2 ಕೋಟಿ ಇದನ್ನೂ ಕೂಡ ಯಾರು ಡಿನೈ ಮಾಡುವುದಕ್ಕೆ ಆಗುವುದಿಲ್ಲ. ಲೋಕಾಯುಕ್ತ ವಿಚಾರಣೆ ಅದನ್ನು ನೋಡಬೇಕು ಯಾವ ರೀತಿ ಡಿನೈ ಮಾಡುತ್ತಾರೆ ಎಂದು ಅಂಟಿಸಿಪೇಟರಿ ಬೈಲ್ ಅದನ್ನೂ ಕೂಡ ಯಾರು ಡಿನೈ ಮಾಡುವುದಕ್ಕೆ ಆಗುವುದಿಲ್ಲ. ಇಷ್ಟೆಲ್ಲಾ ಪರಿಸ್ಥಿತಿ ಇರುವಾಗ ರಾಜ್ಯ ಸರ್ಕಾರದ ನಿಮ್ಮ ಒಂದು ಇಚ್ಛಾಶಕ್ತಿಯನ್ನು ಪ್ರದರ್ಶಿಸುವುದಕ್ಕೋಸ್ಕರ ನಾನು ಆಗಲೇ ಹೇಳಿದೆ ಆ ಮೂಖ ಪ್ರಾಣಿಗಳ ಬಗ್ಗೆ ನಾವು ಬಿಹಾರ್ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಓದುತ್ತೇವೆ. ಇವತು ನಮಗೆ ಒಂದು ಅವಕಾಶ ಇದೆ. ನಾವು ಬಿಹಾರ್‌ನವರು ಅಲ್ಲ ಎಂದು ತೋರಿಸುವುದಕ್ಕೆ. ಆ ಮೂಖ ಪ್ರಾಣಿಗಳ ಹಿತಾಸಕ್ತಿಯನ್ನು ನಾವು ನಿಜವಾಗಿಯೂ ಕಾಪಾಡುವವರು ಆದರೆ ದಯವಿಟ್ಟು ಈ ಪ್ರಕರಣದಲ್ಲಿ ಆ 15 ದಿವಸಗಳಲ್ಲಿ ಏನೇನು ಆಗಿದೆ ಈ ಅಮಾನವೀಯ ವ್ಯವಹಾರಗಳ ಬಗ್ಗೆ ಒಂದು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ಆಗಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತಾ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಎಲ್ಲರೂ ಸುಸ್ತಾಗಿದ್ದಾರೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಪಶುಸಂಗೋಪನಾ ಸಚಿವರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯಕ್ಕೆ ಸೀಮಿತವಾಗಿ ಉತ್ತರ ಕೊಡುವವರಿದ್ದಾರೆ. ಅವರು ಉತ್ತರ ಕೊಡಲಿ.

ಅಧ್ಯಕ್ಷರು : ಅವರು ಡಿಮ್ಯಾಂಡ್ ಮೇಲೆ ಮಾತನಾಡಿದ್ದಾರೆ. ಆದ್ದರಿಂದ ಡಿಮ್ಯಾಂಡ್ಸ್‌ಗೆ ಉತ್ತರ ಕೊಡುವಾಗ ಉತ್ತರ ಕೊಡಲಿ. ಈಗ ನನಗೆ ಒಂದು ಚೀಟಿಯನ್ನು ಕೊಟ್ಟಿದ್ದಾರೆ ನಮ್ಮ ಕಾಂಗ್ರೆಸ್ ಪಕ್ಷದ ಉಪ ನಾಯಕರು ಆ ಹೆಲಿಕ್ಯಾಪ್ಟರ್ ಡೀಲ್ ಬಗ್ಗೆ ಸ್ಟೇಟ್‌ಮೆಂಟ್ ನೆನಪು ಮಾಡಿ ಎಂದು ಹೇಳಿ ಅದರ ಬಗ್ಗೆ ಒಂದು ಹೇಳಿಕೆಯನ್ನು ಸಿದ್ದರಾಮಯ್ಯನವರೇ ನಾಳೆ ಮಾಡಿ ತೊಂದರೆ ಇಲ್ಲ. ಈಗ ಸದನವನ್ನು ಮಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10-00 ಗಂಟೆಗೆ ಸೇರುವುದು.

(ಸದನವು ಸಂಜೆ 7-10 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 13-5-98ರ ಬುಧವಾರ ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)